ವಿಕ್ರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 3 | 1, ಏಪ್ರಿಲ್ 1979 | 40 ಪೈಸೆ

ಪ್ರಯಾಣದರ ಏರಿಕೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಯಾಣ ದರವನ್ನು ಹೆಚ್ಚಿಸಲು ಕಳೆದ ಕೆಲವು ತಿಂಗಳುಗಳಿಂದ ಹವಣಿಸುತ್ತಿತ್ತು. ಹಿಂದೊಮ್ಮೆ ಬಸ್ ಪ್ರಯಾಣದ ದರ ಹೆಚ್ಚಿಸುವ ಮಾತು ಕೇಳಿಬರುತ್ತಿದ್ದಂತೆ ಬೇರೆ ಬೇರೆ ರಾಜಕೀಯ ಪಕ್ಷ, ಸಂಘಟನೆ ಮತ್ತು ಜನತೆಯ ಪ್ರತಿಭಟನೆಯ ಸ್ವರವೂ ಎದ್ದಿತ್ತು. ಆದರೆ ಇದೀಗ ರಾಜ್ಯ ಸಾರಿಗೆ ಸಂಸ್ಥೆಯು ಪ್ರಯಾಣ ದರವನ್ನು ಹೆಚ್ಚಿಸಲು ಸರಕಾರದ ಒಪ್ಪಿಗೆಯನ್ನು ಪಡೆದಿದೆ. ಕಾನೂನಿನ ಅಡಚಣೆಯನ್ನು ಹೋಗಲಾಡಿಸಿದ್ದು, ಏಪ್ರಿಲ್ ಒಂದರಿಂದ ಸಾರಿಗೆ ಸಂಸ್ಥೆಯು ಹೊಸ ದರವನ್ನು ಜಾರಿಗೊಳಿಸಲಿದೆ. ಈ ಹಿಂದೆ ಒಂದು ಕಿಲೋಮೀಟರಿಗೆ 5 ಪೈಸೆ ಇದ್ದರೆ, ಅದನ್ನು ಈಗ 7 ಪೈಸೆಗೆ ಏರಿಸಲಾಗುವುದು. ಹೊಸ ದರದ ಪ್ರಕಾರ 6.5 ಕಿ.ಮೀ. ದೂರದ ಸ್ಟೇಜಿಗೆ ಈಗಿರುವ 35 ಪೈಸೆಗೆ ಬದಲಾಗಿ 45 ಪೈಸೆ ಆಗುವುದು. ಅಂದರೆ ಪ್ರಯಾಣದ ದರವು ಸುಮಾರು ಸ್ಟೇಜಿಗೆ ಶೇ. 28.5 ಕ್ಕಿಂತಲೂ ಹೆಚ್ಚಾಗುವುದು.

ಈಗಾಗಲೇ ಬೆಂಗಳೂರು ನಗರ ಸಾರಿಗೆಯ ಪ್ರಯಾಣ ದರವನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಬೆಂಗಳೂರು ನಗರದ ಜನ ಸಾಮಾನ್ಯರಿಗೆ, ಶ್ರಮಜೀವಿಗಳಿಗೆ ಇದರಿಂದ ಬಹಳಷ್ಟು ಕಷ್ಟವಾಗಿದೆ. ಒಂದೆಡೆ ಕೇಂದ್ರದ ಮುಂಗಡ ಪತ್ರ, ಇನ್ನೊಂದೆಡೆ ರಾಜ್ಯದ ಮುಂಗಡ ಪತ್ರಗಳಿಂದ ಜೀವನಾವಶ್ಯಕ ಮತ್ತು ನಿತ್ಯೋಪಯೋಗಿ ವಸ್ತುಗಳ ಬೆಲೆ ಏರಿದ್ದು, ಇನ್ನೊಂದೆಡೆ ಪ್ರಯಾಣ ದರ ಏರಿಕೆ. ಇಷ್ಟೂ ಸಾಲದೆಂಬಂತೆ ಸಾರಿಗೆ ಸಚಿವ ಗುಂಡೂರಾವ್ ಅವರು ಪ್ರಯಾಣ ದರವನ್ನು ಇನ್ನೂ ಹೆಚ್ಚಿಸಬೇಕಾಗಬಹುದೆಂದು ವಿಧಾನಸಭೆಯಲ್ಲಿ ಹೇಳಿದ್ದಾರೆ. ನಗರಸಾರಿಗೆ ಸಂಸ್ಥೆಗೆ ಪ್ರಯಾಣದರ ಹೆಚ್ಚಿಸುವುದು ಹೊರತು ಬೇರೆ ಮಾರ್ಗವಿಲ್ಲ ಎಂದಿದ್ದಾರೆ.

ಹೈ ಸ್ಪೀಡ್ ಡೀಸಿಲ್ (HSD)ಗೆ ಬೆಲೆ ಏರಿದ್ದು ಒಂದು ಕಾರಣವಾದರೆ, ಹೆಚ್ಚು ಬಸ್‌ಗಳನ್ನು ಹಾಕುವುದು ಮತ್ತು ಸವಲತ್ತುಗಳನ್ನು

ಸಂಪಾದಕೀಯ

ಒದಗಿಸುವುದಕ್ಕಾಗಿ ಬಹಳ ವೆಚ್ಚ ಮಾಡಬೇಕು. ಇದಕ್ಕಾಗಿ ಪ್ರಯಾಣದರ ಹೆಚ್ಚಿಸುವುದು ಅವಶ್ಯವೆಂದು ಸಾರಿಗೆ ಸಂಸ್ಥೆ ಮತ್ತು ಸರಕಾರ ಹೇಳುತ್ತಿವೆ. ಸಾರಿಗೆ ಸಂಸ್ಥೆಯು ಕಳೆದ ಕೆಲವು ವರ್ಷಗಳಿಂದ ಹಾಳಾಗುತ್ತಾ ಬಂದಿದೆ. ಸರಿಯಾದ ಬಸ್ಸುಗಳ ವ್ಯವಸ್ಥೆಯಿಲ್ಲ; ಇರುವ ಬಸ್ಸುಗಳು ಸರಿಯಾಗಿ ಓಡುವ ಗ್ಯಾರಂಟಿ ಇಲ್ಲ. ಬಸ್ ನಿಲ್ದಾಣಗಳ ವ್ಯವಸ್ಥೆಯಂತೂ ಶೋಚನೀಯ. ಸಾರಿಗೆ ಸಂಸ್ಥೆಯಲ್ಲಿರುವಷ್ಟು ಭ್ರಷ್ಟಾಚಾರ ಬೇರೆಲ್ಲೂ ಇಲ್ಲ ಎಂದರೆ ತಪ್ಪಲ್ಲ. ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಯಾವಾಗಲೂ ಪ್ರಯಾಣಿಕರು ತುಂಬ. ಆದರೆ ಆದಾಯ ಮಾತ್ರ ಇಲ್ಲ! ಸಂಸ್ಥೆಯಲ್ಲಿರುವ ಭ್ರಷ್ಟಾಚಾರವನ್ನು ನಿರ್ಮೂಲನಗೊಳಿಸಿದರೆ ಕೋಟಿಗಟ್ಟಲೆ ರೂಪಾಯಿಗಳ ಆದಾಯಬರುವುದು ಮತ್ತು ಉಳಿತಾಯವಾಗುವುದು ಖಂಡಿತ. ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಿ, ಬರುವ ಕೋಟಿಗಟ್ಟಲೆ ರೂಪಾಯಿಗಳ ಆದಾಯದಿಂದ ಸರಿಯಾದ ಮತ್ತು ಸಾಕಷ್ಟು ಬಸ್ಸುಗಳನ್ನು ಒದಗಿಸುವುದು, ಪ್ರಯಾಣಿಕರಿಗೆ ಸವಲತ್ತುಗಳನ್ನು ಕೊಡುವುದಕ್ಕೆ ಬದಲು ಈಗ ಪ್ರಯಾಣ ದರವನ್ನು ಅತಿಯಾಗಿ ಹೆಚ್ಚಿಸಿರುವುದು ಖಂಡನೀಯ.

ಸಾರ್ವಜನಿಕ ಸಂಸ್ಥೆಯು ಜನರಿಗೆ ಉಪಯೋಗವಾಗುವಂತೆ ಮಾಡುವುದಕ್ಕೆ ಬದಲು, ಭ್ರಷ್ಟಾಚಾರದಿಂದಲೂ, ಅವ್ಯವಸ್ಥೆಯಿಂದಲೂ ತುಂಬಿದ್ದು ಜನತೆಗೆ ಬಹಳ ಅನಾನುಕೂಲವಾಗಿದೆ. ಈಗ ಪ್ರಯಾಣ ದರವನ್ನು ಹೆಚ್ಚಿಸಿರುವುದನ್ನು ಜನತೆಯು ವಿರೋಧಿಸಲೇಬೇಕು. ಸರಕಾರವು ದುಂದು ವೆಚ್ಚ ಮಾಡುವುದು, ಶಾಸಕರ ಮತ್ತು ಮಂತ್ರಿಗಳ ವೇತನ ಹೆಚ್ಚು ಮಾಡುವುದು ಮಾತ್ರವಲ್ಲ ಅವರಿಗೆ ಮಾಶಾಸನ ಕೊಡುವುದು ಒಂದೆಡೆಯಾದರೆ, ಜನ ಸಾಮಾನ್ಯರ ಮೇಲೆ ಇಷ್ಟ ಬಂದಂತೆ ಹೊರೆ ಹೇರುವುದು ಇನ್ನೊಂದೆಡೆ. ರಾಜ್ಯ ಸರಕಾರದ ಈ ಜನವಿರೋಧಿ ಧೋರಣೆ ವಿರುದ್ಧ ರಾಜ್ಯದಾದ್ಯಂತ ಜನತೆಯ ಪ್ರತಿಭಟನೆಯು ನಡೆದೇ ತೀರಲಿ.

ಪ್ರತಿಭಟನೆಗೆ ರಾಜ್ಯ ಸಮಿತಿಯ ಕರೆ

ನಗರ ಸಾರಿಗೆ ಬಸ್ ಪ್ರಯಾಣದ ದರವನ್ನು ಬಹಳಷ್ಟು ಹೆಚ್ಚಿಸಲಾಗಿದೆ. ರಾಜ್ಯ ಸಾರಿಗೆ ಸಂಸ್ಥೆಯ ಪ್ರಯಾಣ ದರವನ್ನು ಹೆಚ್ಚಿಸಲು ಸರಕಾರವು ಅನುಮತಿ ಇತ್ತಿದೆ. ರಾಜ್ಯ ಸಾರಿಗೆ ಸಂಸ್ಥೆಯಲ್ಲಿ ತುಂಬಿ ತುಳುಕುತ್ತಿರುವ ಭ್ರಷ್ಟಾಚಾರದಿಂದಲಾಗಿ ಬೊಕ್ಕಸಕ್ಕೆ ಬಾರದೆ ತಪ್ಪಿಹೋಗುವ ಕೋಟಿಗಟ್ಟಲೆ ರೂಪಾಯಿಗಳನ್ನುಳಿಸಿ, ಸರಿಯಾದ ಮತ್ತು ಸಾಕಷ್ಟು ಬಸ್ಸುಗಳ ವ್ಯವಸ್ಥೆ, ಪ್ರಯಾಣಿಕರಿಗೆ ಸೌಲಭ್ಯ ಒದಗಿಸುವ ಬದಲು ಮತ್ತೆ ಜನತೆಯ ಮೇಲೆ ಹೊರೆಯನ್ನು ಹೇರುವುದು ಖಂಡನೀಯ. ಮಾರ್ಚ್ 23 ಮತ್ತು 24 ರಂದು ಬೆಂಗಳೂರಿನಲ್ಲಿ ಕಾಂ. ಎನ್. ಎಲ್. ಉಪಾಧ್ಯಾಯರು ಅಧ್ಯಕ್ಷತೆಯಲ್ಲಿ ಸೇರಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಸಭೆಯು ಬಸ್ಸು ದರ ಹೆಚ್ಚಿಸುವುದನ್ನು ಸಂಪೂರ್ಣವಾಗಿ ವಿರೋಧಿಸಿತು. ರಾಜ್ಯ ಸಾರಿಗೆ ಸಂಸ್ಥೆಯು ಹೊಸದರವನ್ನು ಜಾರಿಗೊಳಿಸುವಂದು, ಅಂದರೆ ಏಪ್ರಿಲ್ ಒಂದರಂದು ರಾಜ್ಯದಾದ್ಯಂತ ಪ್ರತಿಭಟನೆಯನ್ನು ಸಂಘಟಿಸಲು ಪಕ್ಷದ ಎಲ್ಲಾ ಘಟಕಗಳಿಗೂ, ಸಾಮೂಹಿಕ ಸಂಘಟನೆಗಳಿಗೂ ರಾಜ್ಯಸಮಿತಿಯು ಕರೆಯನ್ನಿತ್ತಿತು.

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ತಿತಿಮತಿ ಮತ್ತು ಸುತ್ತುಮುತ್ತಲಿನ ಗ್ರಾಮಗಳಲ್ಲಿ ಸಮಾಜವಾದದ ಬಗ್ಗೆ ಸದಾ ಬೊಬ್ಬಿಡುವ ರಾಜ್ಯಸರಕಾರವು ರೈತರ ಮೇಲೆ ದಬ್ಬಾಳಿಕೆ ನಡೆಸುತ್ತಲಿದೆ. 30-40 ವರ್ಷಗಳಿಂದ ಸರಕಾರಿ ಅರಣ್ಯದಲ್ಲಿ ವಾಸವಾಗಿದ್ದ ಸುಮಾರು ಮುನ್ನೂರು ರೈತರನ್ನು ಈಗ ಅಮಾನುಷವಾಗಿ ಒಕ್ಕಲೆಬ್ಬಿಸಲಾಗುತ್ತಿದೆ. ಹೆಚ್ಚು ಆಹಾರ ಉತ್ಪಾದನೆ ಮಾಡಬೇಕೆಂಬ ಉದ್ದೇಶದಿಂದ ಈ ಹಿಂದೆ ರೈತರಿಗೆ ಅರಣ್ಯ ಪ್ರದೇಶದಲ್ಲಿ ಕೃಷಿಮಾಡಲು ಸರಕಾರವೇ ಪ್ರೋತ್ಸಾಹಿಸಿತ್ತು. ಅರಣ್ಯ ಪ್ರದೇಶದಲ್ಲಿ ಜಮೀನನ್ನು ರೈತರಿಗೆ ಗೇಣಿಗೆ ಕೊಡಲಾಗಿತ್ತು. ರೈತರಿಂದ ಲೆವಿ ವಸೂಲಿಯು ನಡೆದಿತ್ತು. ಪ್ರತಿಚುನಾವಣೆ ಸಮಯದಲ್ಲೂ ಕಾಂಗ್ರೆಸ್ ಮುಖಂಡರು ಮನೆ ಮನೆಗೆ ಹೋಗಿ ಜಮೀನು ಖಾಯಂಗೊಳಿಸುವ ಆಶ್ವಾಸನೆಯನ್ನಿತ್ತಿದ್ದರು. ಆದರೆ ಈಗ ಈ ಪ್ರದೇಶವನ್ನು ಪ್ರಾಣಿಗಳನ್ನು ಸಾಕುವ ಪ್ರದೇಶವನ್ನಾಗಿಸಿ ಪ್ರವಾಸಿಗಳಿಗೆ ಆಕರ್ಷಣೀಯ ಸ್ಥಳವನ್ನಾಗಿ ಮಾಡುವ ಉದ್ದೇಶದಿಂದ ಬಲಾತ್ಕಾರವಾಗಿ ರೈತರನ್ನು ಹೊಡೆದೋಡಿಸಲಾಗುತ್ತಿದೆ. ಅರಣ್ಯ ಇಲಾಖೆಯ ಅಧಿಕಾರಿಗಳೂ, ಪೋಲೀಸರೂ ಸೇರಿ ದಿನಾ ಹತ್ತಾರು ಮನೆಗಳನ್ನು ಕೆಡವಿ, ರೈತರ ಸೊತ್ತುಗಳನ್ನು ಚಲ್ಲಾಪಿಲ್ಲಿ ಮಾಡಿ, ಚಿತ್ರಹಿಂಸೆ ಕೊಡುತ್ತಲಿದ್ದಾರೆ. ಹಣ ಕೊಡುವ ಮತ್ತು ಬೇರೆಡೆ ಭೂಮಿ ಕೊಡುವ ಸುಳ್ಳು ಭರವಸೆಯನ್ನಿತ್ತು, ರೈತರನ್ನು ಹೊಡೆದೋಡಿಸಲು ನಡೆಸಿದ ಕುತಂತ್ರಗಳಿಗೆ ಮರುಳಾಗದೆ ಬಡಜನತೆ ಹೋರಾಡುತ್ತಾ ಬಂದಿದೆ. ಆದರೆ ಸರಕಾರಕ್ಕೆ “ರೈತರಿಗೆ ಭೂಮಿ ಖಾಯಂಗೊಳಿಸಿ, ಉತ್ಪಾದನೆ ಹೆಚ್ಚಿಸುವುದಕ್ಕಿಂತಲೂ ಹೆಚ್ಚಿಗೆ ಪ್ರಾಣಿಗಳ ಮೇಲಿರುವ ಮಮತೆ”. ಎಳೆಯ ಮಕ್ಕಳು, ಗರ್ಭಿಣಿ ಹೆಂಗಸರು, ಮತ್ತು ಹಣ್ಣು ಮುದುಕರು ಮನೆಯಿಲ್ಲದೆ ಮರಗಳಡಿಯಲ್ಲಿ ಮತ್ತು ಜೋಪಡಿಗಳಲ್ಲಿ ಇರುವಂತಾಗಿದೆ. ರಾಜ್ಯ ಸರಕಾರದ ಈ ರೈತ ವಿರೋಧಿ ನೀತಿಯನ್ನೂ, ದಬ್ಬಾಳಿಕೆಯನ್ನೂ ಪಕ್ಷದ ರಾಜ್ಯ ಸಮಿತಿಯು ಖಂಡಿಸಿದೆ. ದಬ್ಬಾಳಿಕೆಯನ್ನು ಕೂಡಲೇ ನಿಲ್ಲಿಸಿ, ಬಡರೈತರಿಗೆ ಭೂಮಿ ಖಾಯಂಗೊಳಿಸದಿದ್ದಲ್ಲಿ ರಾಜ್ಯದಾದ್ಯಂತ ಚಳುವಳಿಯನ್ನು ನಡೆಸಬೇಕಾಗುವುದೆಂದು ಸರಕಾರಕ್ಕೆ ಎಚ್ಚರಿಕೆಯನ್ನು ನೀಡಿದೆ. ಫಾರೆಸ್ಟ್ ಅಧಿಕಾರಿಗಳು ಬಡರೈತರ ಮೇಲೆ ನಡೆಸುವ ಅಮಾನುಷ ಧಾಳಿಯ ವಿರುದ್ಧ ರಾಜ್ಯದಾದ್ಯಂತ ಅರಣ್ಯ ಇಲಾಖೆ ಕಛೇರಿಗಳ ಮುಂದೆ ತೀವ್ರ ಪ್ರತಿಭಟನೆಯನ್ನು ಸಂಘಟಿಸಲು ಪಕ್ಷದ ಎಲ್ಲಾ ಘಟಕಗಳಿಗೂ, ಸಾಮೂಹಿಕ ಸಂಘಟನೆಗಳಿಗೂ ರಾಜ್ಯ ಸಮಿತಿಯು ಕರೆಯಿತ್ತಿದೆ.

ರಾಜ್ಯ ಸರಕಾರಿ ನೌಕರರು ನ್ಯಾಯಯುತವಾದ ಬೇಡಿಕೆಗಳನ್ನು ಮುಂದಿಟ್ಟು ಹೋರಾಡುತ್ತಲಿದ್ದಾರೆ. ಸರಕಾರವು ಇವರ ಬೇಡಿಕೆಗಳನ್ನು ಈಡೇರಿಸುವ ಬದಲು ಮೀನ ಮೇಷ ಎಣಿಸುತ್ತಲಿದೆ. ರಾಜ್ಯ ಸರಕಾರಿ ನೌಕರರ ನ್ಯಾಯವಾದ ಬೇಡಿಕೆಗಳಿಗೂ, ಇವರ ಹೋರಾಟಕ್ಕೂ ರಾಜ್ಯಸಮಿತಿಯು ಸಂಪೂರ್ಣ ಬೆಂಬಲವನ್ನೀಯುವ ತೀರ್ಮಾನ ಮಾಡಿದೆ. ಇವರ ಬೇಡಿಕೆಗಳನ್ನು ಕೂಡಲೇ ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸಲಾಗಿದೆ.

ಈ ಮೇಲಿನ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು, ಸರಕಾರದ ಜನವಿರೋಧಿ ಧೋರಣೆ ವಿರುದ್ಧ ಜನತೆಯ ಸಂಘಟಿತ ಪ್ರತಿಭಟನೆ ಮತ್ತು ಹೋರಾಟಗಳನ್ನು ಬೆಳೆಸಲು ಪಕ್ಷದ ರಾಜ್ಯ ಸಮಿತಿಯು ತನ್ನೆಲ್ಲಾ ಘಟಕಗಳಿಗೆ ಕರೆಯೀಯುತ್ತದೆ.

ಬಜೆಟ್ ವಿರೋಧಿಸಿ ಸಿ.ಪಿ.ಐ.(ಎಂ) ಮೆರವಣಿಗೆ : ೩೦ ಜನರ ಬಂಧನ

(ನಮ್ಮ ವರದಿಗಾರರಿಂದ)

ಕೇಂದ್ರದಲ್ಲಿರುವ ಜನತಾ ಪಕ್ಷದ ಸರ್ಕಾರ ಮತ್ತು ರಾಜ್ಯದಲ್ಲಿನ ಕಾಂಗ್ರೆಸ್(ಐ) ಸರ್ಕಾರಗಳು ತಮ್ಮ ಮುಂಗಡ ಪತ್ರದಲ್ಲಿ ದೇಶದ ಶ್ರೀಸಾಮಾನ್ಯನ ಮೇಲೆ ವಿಪರೀತ ತೆರಿಗೆ ಹೇರಿರುವುದನ್ನು ವಿರೋಧಿಸಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಘಟಕ ಮಾ. 27ರಂದು ಬೆಂಗಳೂರು ನಗರದಲ್ಲಿ ಮೆರವಣಿಗೆಯನ್ನು ಏರ್ಪಡಿಸಿತ್ತು.

ಅಂದು ಬೆಳಿಗ್ಗೆ 9 ಗಂಟೆಗೆ ನಗರದ ನಾನಾ ಭಾಗಗಳಿಂದ ತಂಡೋಪತಂಡವಾಗಿ ಬಂದ ಪಕ್ಷದ ಸದಸ್ಯರು ಮತ್ತು ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಸದಸ್ಯರು ಜನತಾ ಹಾಗೂ ಕಾಂಗ್ರೆಸ್ (ಐ) ಸರ್ಕಾರಗಳ ಜನವಿರೋಧಿ ನೀತಿಗಳನ್ನು ಖಂಡಿಸುತ್ತಾ, ವಿಧಾನಸೌಧದ ಕಡೆ ಮೆರವಣಿಗೆಯಲ್ಲಿ ಹೊರಟರು.

ಬ್ಯಾಂಕ್‌ಬಂಡ್‌ರೋಡ್, ಸುಭೇದಾರ್‌ಛತ್ರಂ ರಸ್ತೆ, ಗಾಂಧಿನಗರದ ಮೂಲಕ ಹಾದ ಮೆರವಣಿಗೆಯು ಮೈಸೂರು ಬ್ಯಾಂಕ್ ಚೌಕದ ಮುಖಾಂತರ ಸರ್ಕಾರಿ ಕಾಲೇಜಿನ ಮುಂಭಾಗದಲ್ಲಿ ನಡೆದು, ಕೆ. ಆರ್. ಸರ್ಕಲ್ ದಾಟಿ ವಿಧಾನಸೌಧದ ಕಡೆಗೆ ಧಾವಿಸುತ್ತಿದ್ದಾಗ ಪೋಲೀಸರು ಮೆರವಣಿಗೆಯನ್ನು ಅಡ್ಡಿಪಡಿಸಿದರು.

ಸುಮಾರು 150 ಮಹಿಳೆಯರನ್ನು ಒಳಗೊಂಡ ಆಕರ್ಷಕ ಮೆರವಣಿಗೆಯಲ್ಲಿ ಸೀಮೆಎಣ್ಣೆ ಅಭಾವವನ್ನು ಸೂಚಿಸುವ ಖಾಲಿ ಡಬ್ಬಗಳು ತೋರಣ ಕಟ್ಟಿದ ರೀತಿಯಲ್ಲಿ ಮೆರವಣಿಗೆಯ ಮುಂಭಾಗದಲ್ಲಿ ಎದ್ದು ಕಾಣುತ್ತಿದ್ದುವು.

“ದಿನಬಳಕೆಯ ವಸ್ತುಗಳ ಬೆಲೆ ಏರಿಸುವ ಜನತಾ-ಕಾಂಗ್ರೆಸ್ (ಐ) ಬಜೆಟ್‌ಗೆ ಧಿಕ್ಕಾರ”, ಬಿ. ಟಿ. ಎಸ್, ಕೆ. ಎಸ್. ಆರ್. ಟಿ. ಸಿ. ದರ ಏರಿಸಿರುವ “ಇಂದಿರಾ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ”, ಜನ ವಿರೋಧಿ ನೀತಿಗಳನ್ನು ಅನುಸರಿಸುತ್ತಿರುವ ಬಂಡವಾಳಶಾಹಿ ಜಮೀನ್ದಾರಿ ಸರ್ಕಾರಕ್ಕೆ ಧಿಕ್ಕಾರ” ಎಂಬಿವೇ ಘೋಷಣೆಗಳನ್ನು ಕೂಗುತ್ತಾ ಶಾಂತ ರೀತಿಯಲ್ಲಿ ಮೆರವಣಿಗೆ ಕಬ್ಬನ್‌ಪಾರ್ಕ್ ದಾಟಿ, ಗೋಪಾಲಗೌಡ ಚೌಕವನ್ನು ತಲುಪಿದಾಗ ಪೋಲೀಸರು ಮೆರವಣಿಗೆಕಾರರನ್ನು ತಡೆದರು.

(೩ನೇ ಪುಟ ನೋಡಿ)

ಸಿ.ಐ.ಟಿ.ಯು. ರಾಜ್ಯ ಸಮಿತಿ ಸಭೆ

ಸಿ. ಐ. ಟಿ. ಯು.ವಿನ ಕರ್ನಾಟಕ ರಾಜ್ಯ ಸಮಿತಿಯ ಸಭೆಯು ಶ್ರೀ ಎಸ್. ಸೂರ್ಯನಾರಾಯಣರಾವ್‌ರವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ತಾ. 25-3-1979ರಂದು ನಡೆಯಿತು. ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಮಂಡಿಸಿದ ವರದಿಯನ್ನು ಸಭೆಯು ಚರ್ಚಿಸಿ ಅಂಗೀಕರಿಸಿತು.

ಸಭೆಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಮುಂಗಡ ಪತ್ರಗಳಲ್ಲಿ ಸೂಚಿಸಿರುವ ತೆರಿಗೆಗಳನ್ನು ವಿರೋಧಿಸುವ ಇವುಗಳ ವಿರುದ್ಧ ಚಳುವಳಿಗೆ ಕರೆಕೊಡುವ ನಿರ್ಣಯವನ್ನು ಅಂಗೀಕರಿಸಿತು.

ಕೆ.ಎಸ್.ಆರ್.ಟಿ.ಸಿ.ಯು ಬಸ್ ದರವನ್ನು ಹೆಚ್ಚಿಸಹೊರಟಿರುವುದು ಜನವಿರೋಧಿ ಕ್ರಮವಾಗಿದ್ದು ಏಪ್ರಿಲ್ 1ರಂದು ಸಿ.ಐ.ಟಿ.ಯು.ಗೆ ಸೇರಿರುವ ಕಾರ್ಮಿಕರು ಇತರರೊಂದಿಗೆ ಸೇರಿ ಬಸ್ ದರ ಹೆಚ್ಚಳವನ್ನು ವಿರೋಧಿಸಲು ಪಿಕೆಟಿಂಗ್, ಸತ್ಯಾಗ್ರಹ, ಮತಪ್ರದರ್ಶನಗಳನ್ನು ನಡೆಸಬೇಕೆಂದು ಕರೆ ಕೊಟ್ಟಿತು.

ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಬೆಂಬಲಿಸಿ ಅವರು ನಡೆಸುತ್ತಿರುವ ಚಳುವಳಿಗೆ ಬೆಂಬಲಕೊಟ್ಟು ಅವರ ಬೇಡಿಕೆಗಳನ್ನು ಈಡೇರಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ರಾಜ್ಯ ಸರ್ಕಾರವು ಆಕ್ಟ್ರಾಯಿಯನ್ನು ತೆಗೆದುಹಾಕುವುದರಿಂದ ಕೆಲಸವಿಲ್ಲದೆ ಹೋಗುವ ಪುರಸಭಾ ನೌಕರರಿಗೆ ಬದಲಿ ನೌಕರಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ಸರ್ಕಾರವನ್ನು ಸಭೆಯು ಒತ್ತಾಯಿಸಿತು.

ಕೊಡಗು ಜಿಲ್ಲೆಯ ತಿತಿಮತಿಯಲ್ಲಿ ಅರಣ್ಯ ಇಲಾಖೆಯು ರೈತರನ್ನು ಬಲಾತ್ಕಾರದಿಂದ ಒಕ್ಕಲೆಬ್ಬಿಸುತ್ತಿರುವುದನ್ನು ಖಂಡಿಸಿ ಇದರ ವಿರುದ್ಧ ರೈತರು ನಡೆಸುತ್ತಿರುವ ಚಳುವಳಿಗೆ ಬೆಂಬಲಕೊಡಬೇಕೆಂದು ರಾಜ್ಯದ ಕಾರ್ಮಿಕವರ್ಗಕ್ಕೆ ಕರೆಕೊಡುವ ಗೊತ್ತುವಳಿಯನ್ನು ಸಭೆಯು ಅಂಗೀಕರಿಸಿತು.

ಏಪ್ರಿಲ್ 9, 10 ರಂದು ಮದರಾಸಿನಲ್ಲಿ ನಡೆಯುವ "ದುಡಿಯುವ ಮಹಿಳೆಯರ ರಾಷ್ಟ್ರೀಯ ಸಮಾವೇಶಕ್ಕೆ ರಾಜ್ಯದಿಂದ 70 ಪ್ರತಿನಿಧಿಗಳು, 11 ರಿಂದ 15 ರ ವರೆಗೆ ಮದರಾಸಿನಲ್ಲಿ ನಡೆಯುವ ಸಿ.ಐ.ಟಿ.ಯು. ವಿನ ಅಖಿಲಭಾರತ ಸಮ್ಮೇಳನಕ್ಕೆ ರಾಜ್ಯದಿಂದ 120 ಪ್ರತಿನಿಧಿಗಳು ಭಾಗವಹಿಸುವುದಾಗಿ ವಿವಿಧ ಸಂಘಗಳಿಂದ ಬಂದ ವರದಿಗಳಿಂದ ವ್ಯಕ್ತವಾಯಿತು.

●

ದಾಂಡೇಲಿ ಕಾರ್ಮಿಕರ ಯಶಸ್ವಿ ಹೋರಾಟ

ವರದಿ : ಯಡೂರು ಮಹಾಬಲ

ಫೆಬ್ರುವರಿ 8 ರಿಂದ ಮಾರ್ಚಿ 10ರ ವರೆಗೂ, ಸುಮಾರು ಒಂದುತಿಂಗಳ ಕಾಲ ದಾಂಡೇಲಿಯಲ್ಲಿ ರಣರಂಗದ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ವೆಸ್ಟ್ ಕೋಸ್ಟ್ ಪೇಪರ್ ಮಿಲ್, ಮತ್ತು ಫೆರ್ರೋ ಅಲಾಯ್ಸ್ ಲಿಮಿಟೆಡ್ ಎರಡೂ ಕಾರ್ಖಾನೆಗಳಲ್ಲಿ ಕಾರ್ಮಿಕ ವರ್ಗ ಪೂರ್ಣಐಕ್ಯತೆಯಿಂದ ಆಡಳಿತ ವರ್ಗದ ಅಮಾನುಷ ಕಿರುಕುಳ, ಅನ್ಯಾಯದ ವಿರುದ್ಧ, ಬೆದರಿಕೆಗಳನ್ನು, ಗೂಂಡಾಗಿರಿಗಳನ್ನು ಪೋಲೀಸ್ ದೌರ್ಜನ್ಯಗಳನ್ನು, ಲಾಠಿ ಪ್ರಹಾರಗಳನ್ನು, ಪ್ರತಿಬಂಧಕಾಜ್ಞೆಗಳನ್ನು ಎದುರಿಸಿ ದಿಟ್ಟ ಹೋರಾಟವನ್ನು ನಡೆಸಿ ಯಶಸ್ಸನ್ನು ಪಡೆಯಿತು.

ಹೋರಾಟದ ಹಿನ್ನೆಲೆ :

ದಾಂಡೇಲಿ ಫೆರ್ರೊ ಅಲಾಯ್ಸ್ ಪ್ರೈ.ಲಿ. ಕಂಪೆನಿಯು ಸ್ಟೀಲ್ ಉತ್ಪಾದನೆಗೆ ಬೇಕಾಗುವ ಫೆರ್ರೊ ಮ್ಯಾಂಗನೀಸ್ ಪದಾರ್ಥವನ್ನು ತಯಾರಿಸುವ ಕಾರಖಾನೆ ಇಂತಹ ಕೈಗಾರಿಕೆ ಕರ್ನಾಟಕದಲ್ಲಿ ಎರಡೇ ಇದ್ದು, ದೇಶದ ಎಲ್ಲಾ ಉಕ್ಕಿನ ಕೈಗಾರಿಕೆಗಳಿಗೂ ಈ ಕಚ್ಚಾ ಪದಾರ್ಥವನ್ನು ಸರಬರಾಜು ಮಾಡುತ್ತವೆ. 1956ರಲ್ಲಿ ಸ್ಥಾಪನೆಯಾದ ಇದು ಲಾಲಬಾಯಿ ಪಟೇಲರ ಕುಟುಂಬದ ಒಡೆತನಕ್ಕೆ ಸೇರಿದ್ದು, ವಾರ್ಷಿಕ ವ್ಯವಹಾರ ಮೂರುವರೆ ಕೋಟಿ ರೂ.ಗಳಿಗೂ ಮಿಕ್ಕಿ ಇದೆ. ಈ ಕಾರ್ಖಾನೆಯಲ್ಲಿ ಸುಮಾರು 25 ವರ್ಷಗಳಿಂದಲೂ ಹೋರಾಟವೇ ನಡೆದಿರಲಿಲ್ಲ.

1978ರ ಆಗಸ್ಟ್ ಮಧ್ಯದಲ್ಲಿ ಆಡಳಿತ ವರ್ಗ ಇದ್ದಕ್ಕಿದ್ದ ಹಾಗೆ ಆರು ಜನ ಕಾರ್ಮಿಕರನ್ನು ವೈದ್ಯಕೀಯ ಕಾರಣಕೊಟ್ಟು, ಯಾವುದೇ ರೀತಿಯ ಪರಿಹಾರವನ್ನೂ ನೀಡದೆ, ಕೆಲಸದಿಂದ ಕಿತ್ತುಹಾಕಿತು. ಆಡಳಿತ ವರ್ಗದ ಈ ದೌರ್ಜನ್ಯವನ್ನು ವಿರೋಧಿಸಿ ಎಲ್ಲಾ ಕಾರ್ಮಿಕರು ಒಂದಾಗಿ ಆಗಿಂದಾಗಲೇ ಮಿಂಚಿನ ಮುಷ್ಕರವನ್ನು ಹೂಡಿದರು. ಕೆಲಸದಿಂದ ತೆಗೆಯಲ್ಪಟ್ಟ ಎಲ್ಲಾ ಆರು ಜನರೂ ಮೂವತ್ತು ವರ್ಷದಾಟದ ಯುವಕರಾಗಿದ್ದು, ವಾಸ್ತವವಾಗಿ ಅವರಿಗೆ ಯಾವುದೇ ಕಾಯಿಲೆಗಳೂ ಇರಲಿಲ್ಲ. ಅಲ್ಲದೆ ವೈದ್ಯಕೀಯ ನೆವ ಹೇಳಿ ಪರಿಹಾರವಿಲ್ಲದೇ ಕೆಲಸದಿಂದ ತೆಗೆಯುವುದು ಅವರ ಕೈಗಾರಿಕೆಯ ಇತಿಹಾಸದಲ್ಲೇ ಪ್ರಥಮಬಾರಿಯಾದುದಾಗಿದ್ದು, ಅತ್ಯಂತ ಆಶ್ಚರ್ಯಕರ ಚಿಂತನೆಗೆ ಈಡುಮಾಡಿತ್ತು. ಕರ್ನಾಟಕ ಸರಕಾರವು 1976ರ ಕರಾಳ ತುರ್ತು ಪರಿಸ್ಥಿತಿಯ ದಿನಗಳಲ್ಲಿ ಸದ್ದುಗದ್ದಲವಿಲ್ಲದೇ ಕೈಗಾರಿಕಾ ಕಾನೂನಿನಲ್ಲಿ ಮಾಡಿದ್ದ ತಿದ್ದುಪಡಿಯೊಂದು ಮೊಟ್ಟಮೊದಲ ಬಾರಿಗೆ ಕಾರ್ಮಿಕರ ಗಮನಕ್ಕೆ ಬಂತು. ಅದೇನೆಂದರೆ: "ಫೆರ್ರೊ ಮ್ಯಾಂಗನೀಸ್ ಕೈಗಾರಿಕೆಯಲ್ಲಿ ತೊಡಗಿರುವ ಕಾರ್ಮಿಕರನ್ನು ಪ್ರತಿ ಮೂರು ತಿಂಗಳಿಗೊಮ್ಮೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಆರೋಗ್ಯ ಸರಿಯಿಲ್ಲದವರನ್ನು ಕೆಲಸದಿಂದ ತೆಗೆಯಬೇಕು" ಎನ್ನುವುದಾಗಿದೆ. ಯಾಕೆ ಫೆರ್ರೋ ಮ್ಯಾಂಗನೀಸ್ ಕೈಗಾರಿಕೆಗಷ್ಟೇ ಅನ್ವಯವಾಗುವಂತೆ ಈ ಕಾನೂನನ್ನು ತರಲಾಯಿತು ಎನ್ನುವುದು ರಹಸ್ಯಮಯವಾಗಿದೆ. ಇದರ ರಹಸ್ಯವೇನೆಂದರೆ, ಅಂದಿನ ಕರ್ನಾಟಕದ ಅರ್ಥಮಂತ್ರಿಯಾಗಿದ್ದ ಸೊಂಡೂರು ಮಹಾರಾಜನ ಮಗ ಎಂ. ವೈ. ಘೋರ್ಪಡೆಯವರು, ಸೊಂಡೂರಿನಲ್ಲೊಂದು ಫೆರ್ರೋ ಮ್ಯಾಂಗನೀಸ್ ಕೈಗಾರಿಕೆಯನ್ನು ಹೊಂದಿದ್ದು ಈ ಮರಿಮಹಾರಾಜನ ಕೈಗಾರಿಕಾದರ್ಬಾರಿಗಾಗಿ ಈ ಕಾನೂನನ್ನು ತರಲಾಗಿದೆ ಎನ್ನುವುದು ಸುಸ್ಪಷ್ಟ. ಹೀಗೆ ಮಾಡಿದ ತಿದ್ದುಪಡಿಯಲ್ಲಿ, ಪರಿಹಾರಧನ ನೀಡುವುದರ ಬಗೆಗೆ ಯಾವ ಶಬ್ದವೂ ಇಲ್ಲ.

ಕಾರ್ಮಿಕರು ಮೆಡಿಕಲ್ ಸರ್ಟಿಫಿಕೇಟನ್ನು ಕೇಳಿ ಪಡೆದುಕೊಂಡು ನೋಡಿದಾಗ, ಆರು ಜನರಲ್ಲಿ ಯಾರಿಗೂ ತೀವ್ರಸ್ವರೂಪದ ಕಾಯಿಲೆಗಳಿರಲಿಲ್ಲ. ಆದ್ದರಿಂದ ಎಲ್ಲಾ 6 ಜನರನ್ನು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳಬೇಕೆಂದೂ, ಇಲ್ಲವಾದಲ್ಲಿ ಕನಿಷ್ಟ ಪಕ್ಷ ಪರಿಹಾರಧನವನ್ನಾದರೂ ನೀಡಬೇಕೆಂದೂ ಕೇಳಲಾಯಿತು. ಆಡಳಿತವರ್ಗ ಒಪ್ಪಲಿಲ್ಲ. 39 ದಿನಗಳಕಾಲ ಮುಷ್ಕರ ಮುಂದುವರಿಯಿತು. ಕಡೆಗೆ ಲೇಬರ್ ಕಮೀಷನರ್‌ರ ಸಮ್ಮುಖದಲ್ಲಿ ಇತ್ಯರ್ಥಕ್ಕೆ ಬರಲಾಯಿತು. ಎಲ್ಲಾ ಆರು ಜನ ಕಾರ್ಮಿಕರನ್ನೂ ವೈದ್ಯಕೀಯ ಪುನರ್‌ಪರಿಶೀಲನೆಗೆ ಒಳಪಡಿಸುವುದೆಂದೂ, ಅಲ್ಲಿಯವರೆಗೆ ಕೆಲಸದಿಂದ ಸಸ್ಪೆನ್‌ಷನ್ ಎಂದು ಪರಿಗಣಿಸಿ, ತಲಾ 1,000 ರೂ. ಪರಿಹಾರ ನೀಡಬೇಕೆಂದೂ ಒಪ್ಪಂದವಾಗಿ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಗಿತ್ತು.

ಎರಡನೇ ಘಟ್ಟ :

ತಿಂಗಳುಗಳು ಕಳೆದರೂ ಆಡಳಿತ ವರ್ಗ ಒಪ್ಪಂದವನ್ನು ಕಾರ್ಯರೂಪಕ್ಕೆ ತರಲಿಲ್ಲ. ವೈದ್ಯಕೀಯ ಪುನರ್‌ಪರಿಶೀಲನೆಗೆ ವ್ಯವಸ್ಥೆ ಮಾಡಲಿಲ್ಲ. 1,000 ರೂ. ಪರಿಹಾರವನ್ನು ಕೊಡಲಿಲ್ಲ. ಬದಲು ತಿಳಿಸದೆ ಕೆಲಸಕ್ಕೆ ಗೈರುಹಾಜರಾದರೆನ್ನುವ ಸುಳ್ಳುಕಾರಣದ ಮೇಲೆ ಮತ್ತೆ ನಾಲ್ಕು ಜನ ಕಾರ್ಮಿಕರನ್ನು ಕೆಲಸದಿಂದ ತೆಗೆದರು.

ದಿನ ಕಳೆದಂತೆ ವಿವಿಧ ರೀತಿಯ ಕಿರುಕುಳಗಳನ್ನು ಕೊಡತೊಡಗಿದರು. ಪ್ರತಿವರ್ಷ ಕೊಡುತ್ತಿದ್ದ ಕಾರ್ಮಿಕ ಮಕ್ಕಳ ಶೈಕ್ಷಣಿಕ ನಿಧಿಯ ಹಣವನ್ನು ಮುಷ್ಕರ ಮುರಿಯುವ ತಮ್ಮ ಚಮಚಾಗಳನ್ನು ಬಿಟ್ಟು ಉಳಿದವರಾರಿಗೂ ನೀಡಲಿಲ್ಲ. ಇದರಿಂದ ಶುಲ್ಕ ಕಟ್ಟದಿದ್ದ ಕಾರ್ಮಿಕರ ಮಕ್ಕಳನ್ನು ಶಾಲೆಯಿಂದ ಅಟ್ಟಲಾಯಿತು.

ಮಾಡಿಕೊಂಡ ಒಪ್ಪಂದದ ವಿರುದ್ಧ ಲೇಬರ್ ಕಮೀಷನರ್ ಎಚ್ಚರಿಕೆಯ ಪತ್ರದ ವಿರುದ್ಧ, ಕಾರ್ಮಿಕ ಸಂಘದ ಪದಾಧಿಕಾರಿಗಳ ಮೇಲೆ ಮುಷ್ಕರದಲ್ಲಿ ಭಾಗವಹಿಸಿದ ಕಾರಣ ವಿಚಾರಣೆಯನ್ನು ಕೈಗೊಂಡರು. ಇವೆಲ್ಲದರ ವಿರುದ್ಧ ಕಾರ್ಮಿಕಸಂಘ ಪ್ರತಿಭಟಿಸುತ್ತಾ ಬಂದದ್ದು, ಫೆಬ್ರುವರಿ 8ನೇ ತಾರೀಖಿನಿಂದ ಆಡಳಿತವರ್ಗವು ಗೂಂಡಾಗಳನ್ನು ಬಿಟ್ಟು ಸಂಘದ ಅಧ್ಯಕ್ಷರ ಮೇಲೆ ದೌರ್ಜನ್ಯವನ್ನು ನಡೆಸಿತು. ಇದರ ಬಗ್ಗೆ ಆಡಳಿತ ವರ್ಗದಲ್ಲಿ ದೂರು ನೀಡಿದಾಗ, 'ತಾವು ನಿಸ್ಸಹಾಯಕರು' ಎಂದು ಹೇಳಿದರು. ರೋಸಿ ಹೋದ ಕಾರ್ಮಿಕರು ಅದೇದಿನದಿಂದಲೇ ಮಿಂಚಿನ ಮುಷ್ಕರವನ್ನು ಪ್ರಾರಂಭಿಸಿ ತಮ್ಮ ಬೇಡಿಕೆಗಳ ಪಟ್ಟಿಯನ್ನು ಕಳಿಸಿಕೊಟ್ಟರು. ಎಲ್ಲಾ ಕಾರ್ಮಿಕರು ಶಿಸ್ತಿನಂತೆ ಕಾರ್ಖಾನೆಯ ಒಳಗೆ ಹೋಗಿ ಯಾವ ಕೆಲಸವನ್ನೂ ಮಾಡದೇ ಕುಳಿತು ಹೊರ ಬರುತ್ತಿದ್ದರು. 36 ದಿನಗಳವರೆಗೆ ಮುಷ್ಕರ ನಡೆಯಿತು. ಕಾನೂನುಭಂಗದ ಪ್ರಸಂಗಗಳು ತಲೆದೋರಿದವು. ಈ 36 ದಿನಗಳೊಳಗೆ ಎರಡು ಬಾರಿ ಲೇಬರ್ ಕಮೀಷನರ್ ಕರೆದು ಮಾತುಕತೆಗಳನ್ನು ನಡೆಸಿದ್ದರೂ ಆಡಳಿತವರ್ಗ ಯಾವ ರೀತಿಯ ಪರಿಹಾರಕ್ಕೂ ಒಪ್ಪಲಿಲ್ಲ. ಮೂರನೇ ಭಾರಿ ವಿಧಿಯಿಲ್ಲದೇ ಒಪ್ಪಂದಕ್ಕೆ ಸಹಿಹಾಕಲೇಬೇಕಾಯಿತು. ಕೆಲಸದಿಂದ ತೆಗೆದ ಎಲ್ಲಾ 6 ಜನ ಕಾರ್ಮಿಕರಿಗೆ ತಲಾ 2500 ರೂ. ಪರಿಹಾರಧನ, ತಡೆಹಿಡಿಯಲ್ಪಟ್ಟ ಶಿಕ್ಷಣ ನಿಧಿಯ ಹಣವನ್ನೂ ಕೂಡಲೇ ಕೊಡುವುದು ಮುಷ್ಕರದ 36 ದಿನಗಳಲ್ಲಿ 25 ದಿನಗಳ ಸಂಬಳವನ್ನು ನೀಡುವುದೂ, ಉಳಿದ 15 ದಿನಗಳ ಸಂಬಳವನ್ನು 12 ಕಂತುಗಳಲ್ಲಿ ತೆಗೆದುಕೊಳ್ಳುವ ಹಾಗೆ ಮುಂಗಡವಾಗಿ ಕೊಡುವುದಕ್ಕೂ ಒಪ್ಪಲಾಯಿತು. ಅದೇರೀತಿ ಮುಷ್ಕರದಲ್ಲಿ ಭಾಗವಹಿಸಿದ್ದಕ್ಕಾಗಿ ನಡೆಸಿದ ವಿಚಾರಣೆಯನ್ನು ಕೈಬಿಡುವುದನ್ನೂ, ಉಳಿದ ನಾಲ್ಕು ಜನ ಕಾರ್ಮಿಕರನ್ನು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳುವುದನ್ನೂ, ಲೋಡಿಂಗ್ ಕೆಲಸಗಾರರನ್ನು ಖಾಯಂಗೊಳಿಸುವುದನ್ನೂ, 15ನೇ ಮೇ 1979 ರೊಳಗಾಗಿ ಬಗೆಹರಿಸುವುದಾಗಿಯೂ ಒಪ್ಪಂದವಾಯಿತು.

ಪೇಪರ್ ಮಿಲ್ಲಿನಲ್ಲಿ :

ಈ ಹೋರಾಟ ನಡೆಯುತ್ತಿರುವಾಗಲೇ ಪಕ್ಕದ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಲಿನಲ್ಲಿ ಹೋರಾಟವು ಉದ್ಭವಿಸಿತು. ಪ್ರತಿವರ್ಷದಂತೆ ಫೆಬ್ರುವರಿ 28ರಂದು ಬೋನಸ್ ಬಟವಾಡೆಯಾಗುವುದಿತ್ತು. ಈ ವರ್ಷ ಕಂಪೆನಿಯು 2-3ರಷ್ಟು ಹೆಚ್ಚು ಲಾಭಗಳಿಸಿರುವುದರಿಂದ, ಕನಿಷ್ಟ ಶೇ. 35ರಷ್ಟು ಬೋನಸನ್ನ ಕೊಡಬೇಕೆಂದು ಕಾರ್ಮಿಕ ಸಂಘವು ಕೇಳತೊಡಗಿತ್ತು. 26ನೇ ಫೆಬ್ರುವರಿಯಂದು ಆಡಳಿತವರ್ಗವು ಆಯವ್ಯಯದ ಪಟ್ಟಿಯನ್ನು ನೀಡಿ ಕೇವಲ ಶೇ. 8.33 ಬೋನಸ್ ಮಾತ್ರ ನೀಡಲಾಗುವುದೆಂದು ಬೋನಸ್ ಕಾನೂನಿನ ಪ್ರಕಾರ ಇದಕ್ಕಿಂತ ಜಾಸ್ತಿ ನೀಡಲು ಸಾಧ್ಯವಿಲ್ಲವೆಂದೂ ತಿಳಿಸಿತು. ತಾ. 28 ರಂದು ಆಡಳಿತವರ್ಗ ಮತ್ತು ಕಾರ್ಮಿಕರ ನಡುವೆ ಚರ್ಚೆ ನಡೆದು ಆಡಳಿತ ವರ್ಗವು ಶೇ. 15ರಷ್ಟು ನೀಡುವವರೆಗೂ ಬಂತು. ಆದರೆ ಹಂಗಾಮಿ ನೌಕರರಿಗೂ (ಕಂಟ್ರಾಕ್ಟ್ ವರ್ಕರ್ಸ್) ಬೋನಸ್ ಕೊಡಬೇಕೆನ್ನುವುದನ್ನ ಒಪ್ಪಲಿಲ್ಲ. ಕಾರ್ಮಿಕರು ಕನಿಷ್ಟ ಶೇ. 20ರಷ್ಟು ಬೋನಸ್ ನೀಡಬೇಕೆಂದೂ, ಹಂಗಾಮಿ ಕಾರ್ಮಿಕರಿಗೂ ಅದೇ ಪ್ರಮಾಣದಲ್ಲೇ ನೀಡಬೇಕೆಂದೂ ಪಟ್ಟು ಹಿಡಿಯಿತು. ಒಪ್ಪಂದವಾಗದ ಕಾರಣ ಮಾರ್ಚ್ 1 ರಂದು, ಒಂದು ದಿನದ ಸಾಂಕೇತಿಕ ಮುಷ್ಕರಕ್ಕೆ ಕರೆ ಕೊಡಲಾಯಿತು. ಮುಷ್ಕರ ನಡೆಯುತ್ತಿದ್ದಾಗ ಕಾರ್ಖಾನೆಯ ಒಳಗೆ ಯಾರೂ ಹೋಗಕೂಡದೆಂದು ಕಾರ್ಮಿಕರು ನಿಂತು ಹೇಳುತ್ತಿದ್ದರೂ, ಜನರಲ್ ಮ್ಯಾನೇಜರ್ ಕಾರ್ಮಿಕರ ಕೂಗನ್ನು ಧಿಕ್ಕರಿಸಿ ಒಳಹೋದದ್ದು ಕಾರ್ಮಿಕರನ್ನು ರೇಗಿಸಿತು. ಹೊರಗಿನಿಂದಲೇ ಕರೆಗಳೂ, ಘೋಷಣೆಗಳೂ ಜೋರಾಯಿತು. ಆತ ಕಾರ್ಖಾನೆಯ ಹಿಂಬಾಗಿಲಿನಿಂದ ತಪ್ಪಿಸಿಕೊಂಡು ಹೋಗುತ್ತಿದ್ದಾಗ ಘರ್ಷಣೆಯುಂಟಾಯಿತು. ಕಾರೊಂದಕ್ಕೆ ಬೆಂಕಿಯೂ ತಗುಲಿತು. ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ರಸ್ತೆಯ ಪಕ್ಕದಲ್ಲಿ ಕೂತಿದ್ದ ಕಾರ್ಮಿಕನೊಬ್ಬನನ್ನು ದರ್ಪದ ಪೋಲೀಸ್ ಅಧಿಕಾರಿಯೊಬ್ಬ ಬೂಟಿನಿಂದ ಒದ್ದ. ಇದನ್ನು ಸಹಿಸಲಾಗದ ಕಾರ್ಮಿಕರು ಅಧಿಕಾರಿಗೇ ತಿರುಗಿ ಬಿಗಿದರು. ಪೋಲೀಸರು ಅಶ್ರುವಾಯು ಪ್ರಯೋಗಿಸಿದರು. ಲಾಠಿಪ್ರಹಾರ ಮಾಡಿದರು. ಪರಿಸ್ಥಿತಿ ಶಾಂತವಾದ ನಂತರ ಇಬ್ಬರಲ್ಲಿಯೂ ತಪ್ಪಿರುವುದರಿಂದ ರಾಜಿಯಲ್ಲಿ ಮುಕ್ತಾಯವಾಗಿತ್ತು. 2ನೇ ತಾರೀಖಿನಿಂದ ಕಾರ್ಮಿಕರು ಕೆಲಸಕ್ಕೆ ಹೋದರು. ಎರಡು ದಿವಸಗಳಾದ ನಂತರ ಅಂದರೆ 3ನೇ ತಾರೀಖಿನಂದು ಪೋಲೀಸ್ ಉನ್ನತಾಧಿಕಾರಿ ಡಿ. ಐ. ಜಿ. ಸ್ಥಳಕ್ಕೆ ಭೇಟಿ ಕೊಟ್ಟರು. ಅಂದೇ ಇದ್ದಕ್ಕಿದ್ದಂತೆ, ಕೆಲವು ಕಾರ್ಮಿಕ ಕಾರ್ಯಕರ್ತರನ್ನು ಬಂಧಿಸಲಾಯಿತು. 144ನೇ ಕಲಮನ್ನು ಜಾರಿಗೊಳಿಸಲಾಯಿತು. ದೊಡ್ಡ ಪೋಲೀಸ್ ಪಡೆಯನ್ನೇ ತಂದು ನಿಲ್ಲಿಸಲಾಯಿತು. ಮ್ಯಾಜಿಸ್ಟ್ರೇಟ್ ಬಂಧಿತರನ್ನು ಜಾಮೀನು ಮೇಲೆ ಬಿಡುಗಡೆ ಮಾಡಲಿಲ್ಲ. 11ರಿಂದ ಪ್ರಾರಂಭವಾಗಬೇಕಾಗಿದ್ದ ಅನಿರ್ಧಿಷ್ಟ ಮುಷ್ಕರ 4 ರಿಂದಲೇ ಪ್ರಾರಂಭವಾಯಿತು. ಹುಬ್ಬಳ್ಳಿಯಿಂದ ಹಿಡಿದು ಅಂಕೋಲಾದವರೆಗೆ ಶೋಧನೆ ನಡೆಸಿ, ಕಾರ್ಮಿಕ ನಾಯಕ ಆರ್. ಜಿ. ಸ್ಥಳೇಕರ್‌ರವರನ್ನು ತಾ. 5ರಂದು ಕ್ರಿಮಿನಲ್ ಮೊಕದ್ದಮೆಯ ಮೇಲೆ ಬಂಧಿಸಲಾಯಿತು. ಮುಖಂಡರು, ಕಾರ್ಯಕರ್ತರು ಜೈಲಿನಲ್ಲಿ. ಕಾರ್ಮಿಕರ ಮುಷ್ಕರ ಮುಂದುವ

(7ನೇ ಪುಟ ನೋಡಿ)


ಬನಶಂಕರಿಯ ಬಡಜನತೆಯ ಅಸಹಾಯಕತೆ

ಸಮಾಜವಾದ ಬಾಯಲ್ಲಿ ಗೂಂಡಾಗಿರಿ ಕೈಯಲ್ಲಿ

ವರದಿ : ಎಸ್. ಶಿವರಾಂ

ಸುಮಾರು ಐವತ್ತು ವರುಷಗಳ ಮೊದಲು ಭಾರತದಲ್ಲಿ ಕೇವಲ ಕೆಲ ಮಂದಿ ಮಾತ್ರ ಮುಖ್ಯವಾಗಿ, ಕಮ್ಯುನಿಸ್ಟರು ಸಮಾಜವಾದ, ವರ್ಗ ಹೋರಾಟಗಳ ಚಾರಿತ್ರಿಕ ಘಟನೆಗಳ ಬಗ್ಗೆ ಕಾರ್ಯಪ್ರವೃತ್ತರಾಗಿದ್ದರೆ, ಇಂದು ಎಲ್ಲರೂ, ಮುಖ್ಯವಾಗಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ತಮ್ಮ ಭಾಷಣ, ಪತ್ರಿಕಾ ಹೇಳಿಕೆಗಳಲ್ಲೂ, ವಿವಿಧ ವೇದಿಕೆಗಳಲ್ಲೂ ಹರಿಜನ-ಗಿರಿಜನೋದ್ಧಾರ, ಅಲ್ಪ ಸಂಖ್ಯಾತರ ರಕ್ಷಣೆ, ವರ್ಗಹೋರಾಟ, ಸಮಾಜವಾದ ಈ ಮಂತ್ರಗಳನ್ನು ಮೊದಲು ಜಪಿಸದೆ ಏನನ್ನೂ ಮಾಡುವುದೇ ಇಲ್ಲ.

ಈ ಆಕರ್ಷಣೀಯ ಪದಗಳ ಮುಖವಾಡದೊಳಗೆ, ಎಷ್ಟೊಂದು ಅಮಾನವೀಯ ಕ್ರೌರ್ಯ, ದಬ್ಬಾಳಿಕೆಗಳು ಸಹಸ್ರ ರೀತಿಯಲ್ಲಿ ಬಸುಗುಟುತ್ತಿವೆ, ಎಂಬುದು ಶ್ರೀ ದೇವರಾಜ ಅರಸರ ಆಡಳಿತದ ಹುತ್ತದೊಳಗೆ ಕೈ ಹಾಕಿದವರಿಗೆ ಮಾತ್ರ ಗೊತ್ತು.



ಬೆಂಗಳೂರಿನ ಬನಶಂಕರಿಯ ದೇವಸ್ಥಾನದ ಹಿಂಬಾಗದಲ್ಲಿರುವ, ಸರ್ವೆ ನಂ. 55, 56,-1, 2, 3ರ ಭೂಮಿಯಲ್ಲಿ, ಸುಮಾರು ಹತ್ತು ವರ್ಷಗಳಿಂದ ಇಪ್ಪತ್ತು ಗುಡಿಸಲು ನಿವಾಸಿಗಳಿದ್ದರು. ಕಳೆದ ಒಂದು ವರ್ಷದಿಂದ ಅರಸು ಸರ್ಕಾರದ ಎಂ. ಎಲ್. ಸಿ. ಗಳೊಬ್ಬರ ಆಶ್ವಾಸನೆಯ ಮೇರೆಗೆ ಆರುನೂರು ಗುಡಿಸಲುಗಳು ನಿರ್ಮಿಸಲ್ಪಟ್ಟವು. ಪ್ರತಿಯೊಂದು ಸೈಟಿನ (ಚದರಡಿ 20 × 25) ಬೆಲೆ ನೂರಹನ್ನೊಂದು ರೂ. ಅಳತೆಗಾಗಿ ಐದು ರೂ. ಗುಡಿಸಲುಗಳ ನಂಬರಿಗಾಗಿ ಹತ್ತು ರೂ. ಗುಡಿಸಲುಗಳನ್ನು ನಿರ್ಮಿಸಿಕೊಳ್ಳಲು ಸಾವಿರ, ಸಾವಿರದೈನೂರು. ಹೀಗೆ ಈ ಬಡಪಾಯಿಗಳು ಹೊಟ್ಟೆ ಬಟ್ಟೆ ಕಟ್ಟಿ ಖರ್ಚುಮಾಡಿದರು. ನಗರದ ಬೇರೆ ಬೇರೆ ಕಡೆ ವಾಸಿಸುತ್ತಿದ್ದ ನಿರ್ಗತಿಕರು, ಇದ್ದ ಸ್ಥಳವನ್ನು ಬಿಟ್ಟು ಆಸೆಯಿಂದ ಬನಶಂಕರಿಗೆ ಬಂದು ಜೋಪಡಿಗಳನ್ನು ನಿರ್ಮಿಸಿಕೊಂಡರು.

ಈ ಜೋಪಡಿಗಳನ್ನು ನಿರ್ಮಿಸುವುದಕ್ಕೆ ಮೊದಲು ಎಂ. ಎಲ್. ಸಿ. ಗಳ ಜೊತೆಯಲ್ಲಿ, ಬೆಂಗಳೂರು ಡೆವಲಪ್‌ಮೆಂಟ್ ಅಧಿಕಾರಿಗಳೊಬ್ಬರ ಸ್ಥಳ ಪರಿಶೀಲನೆ ನಡೆದು ಅವರ ವಿಶ್ವಾಸ, ಉದಾರತೆಗಳನ್ನು ಸಹ ಗಳಿಸಿಕೊಂಡರು ಈ ನಿರ್ಗತಿಕರು. ಒಂದೇ ವರ್ಷದಲ್ಲಿ ಹೆಂಚು, ಹುಲ್ಲು, ಇತ್ಯಾದಿಗಳ ಜೋಪಡಿಗಳು ರಭಸಗತಿಯಲ್ಲಿ ಆರು ನೂರು ಬೆಳೆದುವು.

ಒಂದು ದಿನ ಅನ್ನವಿಲ್ಲದಿದ್ದರೂ ಚಿಂತಿಲ್ಲ, ಇರಲೊಂದು ನೆರಳಾಯಿತು ಎಂದು ಸಮಾಧಾನದ ಉಸಿರಾಡುತ್ತಿತ್ತು ಇಲ್ಲಿನ ಎರಡೂವರೆ ಸಾವಿರ ಹೆಚ್ಚಿನ ಹರಿಜನ ಸಮೂಹ, ಆದರೆ ತುರ್ಕ್‌ಮನ್‌ಗೇಟಿನ ಬುಲ್‌ಡೋಜರ್ ಬೆಂಗಳೂರಿನ ಬನಶಂಕರಿಗೆ ಬರಬಹುದೆಂದು ಈ ಬಡವರು ಊಹಿಸಲು ಹೇಗೆ ತಾನೆ ಸಾಧ್ಯವಿತ್ತು? ಇನ್ನೂ ಬುಲ್‌ಡೋಜರ್ ಬಂದಿಲ್ಲ ನಿಜ, ಅದಿಲ್ಲದೇ ಸುಮಾರು ಐದು ನೂರು ಗುಡಿಸಲುಗಳನ್ನು ಕೆಡವಲಾಗಿದೆ, ಅಥವ ವಾಸಿಸಲು ಅಯೋಗ್ಯವನ್ನಾಗಿ ಮಾಡಲಾಗಿದೆ.

ಉಳಿದ ನೂರು ಗುಡಿಸಲುಗಳನ್ನು ನೆಲಸಮ ಮಾಡಲು ಮಾತ್ರ ಬುಲ್‌ಡೋಜರ್ ಬರುವುದಾಗಿ ಬೆದರಿಕೆ ಹಾಕಿದ್ದಾರೆ, ಅರಸು ಸರ್ಕಾರದ ಸಮಾಜವಾದಿ ಅಧಿಕಾರಿಗಳು.

ಕಳೆದ 17ರ ಶನಿವಾರ ಮಧ್ಯಾಹ್ನ ಕೈಲಾಗದ ಅಸಹಾಯಕರೂ, ವೃದ್ಧರೂ ಗರ್ಭಿಣಿ ಬಾಣಂತಿಯರಿದ್ದ ಸಮಯದಲ್ಲಿ, ಸ್ಪೆಷಲ್ ಡೆಪ್ಯುಟಿ ಕಮೀಷನರ್ (ಲ್ಯಾಂಡ್ ಅಕ್ವಿಸಿಷನ್) ರವರೂ ಆತನ ಕೈಕೆಳಗಿನ ಅಧಿಕಾರಿಗಳೂ, ಸುಮಾರು ನೂರುಜನ ಗೂಂಡಾಗಳು ಇದ್ದಕ್ಕಿದ್ದಹಾಗೆ ಗುಡಿಸಲುಗಳಿಗೆ ಮುತ್ತಿಗೆ ಹಾಕಿದರು, ಪೋಲೀಸರು ಪ್ರತ್ಯಕ್ಷರಿದ್ದರು ಗೂಂಡಾಗಳನ್ನು ರಕ್ಷಿಸಲು !

ಹೆಣ್ಣು ಮಕ್ಕಳ ಹೃದಯ ವಿದ್ರಾವಕ ಅಳು, ಮತ್ತೊಂದು ಕಡೆಯಿಂದ ಹತ್ತಾರು ಮಕ್ಕಳು ಒಂದೇ ಬಾರಿಗೆ ತಮ್ಮ ಎಳೆಯ ರಟ್ಟೆಗಳನ್ನು ಯಾರೋ ತಿರುಚುತ್ತಿದ್ದಾರೆ, ಎಂಬಂತಹ ಅಳು, ಮಗದೊಂದು ಕಡೆಯಿಂದ ಬಿರುಗಾಳಿಯಲ್ಲಿ ಬಿದಿರು ಮೆಳೆ ಮುರಿದರೆ ಬರುವ ಶಬ್ಧದಂತೆ ಗುಡಿಸಲುಗಳು ಮುರಿದು ಬೀಳುತ್ತಿವೆ. ಒದೆ ತಿಂದ ಗೋಡೆಗಳು ಉರುಳುವಾಗ ಭಯಗೊಂಡಮಕ್ಕಳು, ಹೆಂಗಸರು ಹೊರಗೋಡಿ ಬಂದರು ತಿನ್ನುತ್ತಿದ್ದ ಅನ್ನವನ್ನು ಅಲ್ಲಿಯೇ ಮಣ್ಣಿನಲ್ಲಿ ಬೆರೆಯಲು ಬಿಟ್ಟು. ಇಂತಹ ಅಸಹಾಯಕ ಆರ್ತನಾದಗಳನ್ನು ಕೇಳುವವರು ಯಾರೂ ಇಲ್ಲದೆ ಬಿಸಿಲು ಬೇಗೆಯಲ್ಲಿ ಬೆಂದು ಹೋದವು ಮಾತ್ರ, ಒಂದು ಗಂಟೆಯ ಅವಧಿಯಲ್ಲಿ ಜೋಪಡಿಗಳು ಉರುಳಿಯೇ ಉರುಳಿದವು.

(6ನೇ ಪುಟ ನೋಡಿ)

ಕಾಫಿ ಕ್ಯೂರಿಂಗ್ ಕಾರ್ಮಿಕರ ಯಶಸ್ವಿ ಹೋರಾಟ

ವರದಿ : ವಿ. ಸುಕುಮಾರ್

ಹಾಸನ ನಗರದ ಕೊಠಾರಿಕಾಫಿ ಕ್ಯೂರಿಂಗ್ ವರ್ಕ್ಸ್‌ನ ಸುಮಾರು 250 ಜನ ಕಾರ್ಮಿಕರು ಅದರಲ್ಲೂ ಶೇಕಡ 90 ಮಹಿಳಾ ಕಾರ್ಮಿಕರು ಕಾನೂನು ಬಾಹಿರವಾಗಿ ಸದರಿ ಕ್ಯೂರಿಂಗ್ ವರ್ಕ್ಸ್‌ನ ಸುಮಾರು 100 ಜನ ಮಹಿಳಾ ಕಾರ್ಮಿಕರನ್ನು ಮತ್ತು 11 ಜನ ಮಿಲ್ ವರ್ಕರ್ಸ್‌ನ್ನು ಕೆಲಸ ನಿಲ್ಲಿಸಿದುದರ ವಿರುದ್ಧ ಡೆಪ್ಯುಟಿ ಲೇಬರ್ ಕಮಿಷನರ್ ಯಾವುದೇ ಕ್ರಮ ಕೈಗೊಳ್ಳದ್ದನ್ನು ವಿರೋಧಿಸಿ ತಾ. 15-3-79 ರಿಂದ ಮುಷ್ಕರ ಪ್ರಾರಂಭಿಸಿದರು. 15-3-79 ರಂದು ಸದರಿ ಕಾರ್ಮಿಕರಿಗೆ ಸಹಾನುಭೂತಿ ವ್ಯಕ್ತಪಡಿಸಲು ಹಾಸನ ಕಾಫಿ ಕ್ಯೂರಿಂಗ್ ವರ್ಕ್ಸ್‌ನ ಸುಮಾರು 200 ಜನ ಕಾರ್ಮಿಕರು ಒಂದು ದಿನದ ಮುಷ್ಕರ ನಡೆಸಿ ಆದಿನ ಹಾಸನ ನಗರದಲ್ಲಿ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡರು. ಈಗಾಗಲೇ ಕಳೆದ ನಾಲ್ಕು ತಿಂಗಳಿನಿಂದಲೂ ಮುಷ್ಕರ ನಡೆಸುತ್ತಿರುವ ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್‌ನ ಕಾರ್ಮಿಕರು ಸಹ ಈ ಮೆರವಣಿಗೆಯಲ್ಲಿ ಭಾಗವಹಿಸಿ ರಾಜ್ಯಸರಕಾರದ ಲೇಬರ್ ಇಲಾಖೆಯ ನಿಷ್ಕ್ರೀಯತೆಯ ವಿರುದ್ಧ ಘೋಷಣೆ ಕೂಗಿದರು.

ತಾ. 15-3-79 ರಿಂದ ಡೆಪ್ಯುಟಿ ಲೇಬರ್ ಕಮಿಷನರ್‌ರವರ ಕಛೇರಿಯ ಮುಂದೆ ದಿನಕ್ಕೆ 15-20 ಜನ ಮಹಿಳಾಕಾರ್ಮಿಕರೂ ತಾ. 19-3-79ರ ವರೆಗೆ ದರಣಿ ಸತ್ಯಾಗ್ರಹವೂ, ಕಾರ್ಖಾನೆಯ ಮುಂದೆ ಬಾಕಿ ಉಳಿದಿದ್ದ ಕಾರ್ಮಿಕರು ದರಣಿ ನಡೆಸುತ್ತಿದ್ದರು. ಡೆಪ್ಯುಟಿ ಲೇಬರ್ ಕಮಿಷನರ್ ಕರೆದಿದ್ದ ಪಂಚಾಯ್ತಿಕೆಯಲ್ಲಿ ತಾ. 19-3-79 ರಂದು ಸದರಿ ಕಾರ್ಖಾನೆ ಅಸಿಸ್ಟೆಂಟ್ ಮ್ಯಾನೇಜರ್ ಭಾಗವಹಿಸಿದ್ದು ತಮ್ಮ ಮದ್ರಾಸ್ ಆಫೀಸಿನಿಂದ ಕಾನೂನು ಸಲಹೆಗಾರರು ಬರಬೇಕಾಗಿರುವುದರಿಂದ ಈ ಪಂಚಾಯ್ತಿಕೆಯನ್ನು 21-3-79 ರ ಮಧ್ಯಾಹ್ನ ಮೂರು ಗಂಟೆಗೆ ಮುಂದುವರಿಸಲು ಕೇಳಿಕೊಂಡರು.

ಈ ಪಂಚಾಯ್ತಿಕೆಯಲ್ಲಿ ಕಾರ್ಮಿಕರ ಬೇಡಿಕೆಗಳ ಪಟ್ಟಿಯನ್ನು ಕಾರ್ಮಿಕರ ಪರವಾಗಿ ಭಾಗವಹಿಸಿದ್ದ ಕಾಂ. ವಿ. ಸುಕುಮಾರ್ ಮತ್ತು ಕಾಂ. ಎ. ಕೆ. ವಿಶ್ವನಾಥ್ ಮ್ಯಾನೇಜ್‌ಮೆಂಟಿಗೆ ಕೊಟ್ಟರು. (ಕೆಲಸದಿಂದ ನಿರಾಕರಿಸಲ್ಪಟ್ಟ ಎಲ್ಲಾ ಕಾರ್ಮಿಕರಿಗೂ ಕೆಲಸ ಸಿಗಬೇಕು, 1-1-78 ರಿಂದ ಶೇ. 25 ರಂತೆ ಎಲ್ಲಾ ಕಾರ್ಮಿಕರಿಗೂ ಸಂಬಳ ಹೆಚ್ಚಿಗೆ ಸಿಗಬೇಕು. ಕೆಲಸಗಾರರ ಮೇಲೆ ನಡೆಯುವ ಗೂಂಡಾದಾಳಿ ನಿಲ್ಲಬೇಕು ಇತ್ಯಾದಿ ಬೇಡಿಕೆಗಳು)

ತಾ. 20-3-79 ರಿಂದ ಸದರಿ ಕ್ಯೂರಿಂಗ್‌ನ ಎಲ್ಲಾ ಕಾರ್ಮಿಕರು ಡೆಪ್ಯುಟಿ ಲೇಬರ್ ಕಮಿಷನರ್‌ರವರ ಕಛೇರಿಯ ಮುಂದೆ ದರಣಿ ಪ್ರಾರಂಭಿಸಿದರು.

ತಾ. 21-3-79 ರಂದು ಮೂರು ಗಂಟೆಗೆ ಡೆಪ್ಯುಟಿ ಲೇಬರ್ ಕಮಿಷನರ್‌ರ ಗೈರುಹಾಜರಿಯಲ್ಲಿ ಅಸಿಸ್ಟೆಂಟ್ ಲೇಬರ್ ಕಮಿಷನರ್ ಹಾಜರಿದ್ದು, ಕಾರ್ಮಿಕ ಪ್ರತಿನಿಧಿಗಳು ಹಾಜರಿದ್ದರೂ ಮ್ಯಾನೇಜ್‌ಮೆಂಟ್, ಹೆಚ್ಚಿಗೆ ಕಾರ್ಮಿಕರು ಡೆಪ್ಯುಟಿ ಲೇಬರ್ ಕಮಿಷನರ್ ರವರ ಕಛೇರಿಯ ಮುಂಭಾಗದಲ್ಲಿರುವುದರಿಂದ ತಮಗೆ ಪ್ರಾಣ ಭಯವಾಗುತ್ತಿರುವುದರಿಂದ ಕನ್ಸಿಲಿಯೇಷನ್‌ಗೆ ಬರಲು ಸಾಧ್ಯವಿಲ್ಲವೆಂದು ಬರೆದು ತಿಳಿಸಿದರು. ಇದನ್ನು ತಿಳಿದ ಕಾರ್ಮಿಕರು ಡೆಪ್ಯುಟಿ ಲೇಬರ್ ಕಮಿಷನರ್ ಆಫೀಸಿನ ಆವರಣದೊಳಗೆ ಬಂದು ತಾವು ಈ ವಿವಾದ ಇತ್ಯರ್ಥವಾಗುವವರೆಗೆ ಸ್ಥಳ ಬಿಟ್ಟು ಕದಲುವದಿಲ್ಲವೆಂದು ಅಲ್ಲಿಯೇ ಕುಳಿತರು. ಸುಮಾರು 200 ಜನ ಮಹಿಳಾಕಾರ್ಮಿಕರು ಇಡೀ ರಾತ್ರಿ ಅಲ್ಲಿಯೇ ಇದ್ದುದರ ಪರಿಣಾಮವಾಗಿ ಡೆಪ್ಯುಟಿ ಲೇಬರ್ ಕಮಿಷನರ್‌ರವರು ಮ್ಯಾನೇಜ್‌ಮೆಂಟನ್ನು ಪಂಚಾಯ್ತಿಕೆಗೆ ಕರೆಸಲು ಪೋಲೀಸ್ ಆಫೀಸರ ಸಹಾಯ ತೆಗೆದುಕೊಂಡು ತಾ. 22-3-79ರಂದು ಆಫೀಸಿಗೆ ಮ್ಯಾನೇಜ್‌ಮೆಂಟನ್ನು ಕರೆಸಿ ಡೆಪ್ಯುಟಿ ಲೇಬರ್ ಆಫೀಸರ್ ಮತ್ತು ಡಿ.ಎಸ್.ಪಿ. ಅವರ ಸಮ್ಮುಖದಲ್ಲಿ ಸಂಧಾನ ನಡೆದು ಮಹಿಳಾಕಾರ್ಮಿಕರಿಗೆ ವೇತನದಲ್ಲಿ ಹೆಚ್ಚಳ ಶೇ. 25 ರಂತೆ ಜುಲೈ 78ರಿಂದ ಕೊಡುವುದೆಂತಲೂ, ಮಿಲ್ ಕಾರ್ಮಿಕರಿಗೆ ದಿನಕ್ಕೆ 1-20 ಪೈಸೆಯಂತೆಯೂ, ಕೂಡಲೇ ಕೆಲಸದಿಂದ ನಿರಾಕರಿಸಲ್ಪಟ್ಟ ಎಲ್ಲಾ ಮಿಲ್ ವರ್ಕರ್ಸ್‌ನ್ನು ಹಾಗೂ ಹಂಗಾಮಿ ಕೆಲಸಗಾರರೆಂಬ 20 ಜನರನ್ನು ಕೆಲಸಕ್ಕೆ ಪುನರ್ನೇಮಕ ಮಾಡಿಕೊಳ್ಳುವುದೆಂದೂ, ನಂತರ ಹಂತ ಹಂತವಾಗಿ ಹೊರಹಾಕಿರುವ ಎಲ್ಲಾ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವುದೆಂದೂ ಹೊಸ ಕಾರ್ಮಿಕರನ್ನು ನೇಮಕ ಮಾಡದೆ ಹಳಬರಿಗೆ ಆದ್ಯತೆ ಕೊಡುವುದೆಂದೂ, ಹೆಚ್ಚಳವಾದ ಸಂಬಳದ ಬಾಕಿಯನ್ನು 24-3-79 ರಂದು ಪಾವತಿ ಮಾಡುವುದೆಂತಲೂ, ಬಾಕಿ ಉಳಿದಿರುವ ಪ್ರಶ್ನೆಗಳ ಬಗ್ಗೆ ಒಂದು ತಿಂಗಳೊಳಗೆ ಪುನಃ ಸಭೆ ಸೇರಿ ಮಾತುಕತೆ ನಡೆಸುವುದೆಂದೂ ತೀರ್ಮಾನವಾಗಿ ಒಂದು ಒಪ್ಪಂದವಾಯಿತು. ಈ ಒಪ್ಪಂದದ ನಂತರ 8 ದಿನಗಳಿಂದ ನಡೆಯುತ್ತಿದ್ದ ಮುಷ್ಕರವನ್ನು ಹಾಗೂ ಸಾಮೂಹಿಕ ದರಣಿಯನ್ನು ಹಿಂತೆಗೆದುಕೊಳ್ಳಲಾಯಿತು. ಈ ಹೋರಾಟ ಯಶಸ್ವಿಯಾಗಲು ನಗರದ ಕೆಲವು ಕಾರ್ಮಿಕ ಹಿತೈಷಿಗಳು ಸಹಾಯ ಮಾಡಿದರು. ●

ಸ್ಟಾಲಿನ್

“ಪಕ್ಷದ ಸಂಘಟನೆಯನ್ನು ಕುರಿತು”

ಒಂದು ಸರಿಯಾದ ಪಕ್ಷದ ನೀತಿಯನ್ನು ರೂಪಿಸಿ, ಅದನ್ನು ಮಾಳಿಗೆಗಳ ಮೇಲೆ ನಿಂತು ಘೋಷಿಸಿ, ತತ್ವ ಮತ್ತು ಗೊತ್ತುವಳಿಗಳ ರೂಪದಲ್ಲಿ ಹೇಳಿ, ಇದ್ದಕ್ಕಿದ್ದ ಹಾಗೆ ಜಯವು ದೊರಕಿತೋ ಅನ್ನುವ ಹಾಗೆ, ಅದಕ್ಕೆ ಮತಗಳಿಸಿ ಅದನ್ನು ಅವಿರೋಧ ನೀತಿಯನ್ನಾಗಿ ಮಾಡಿಬಿಟ್ಟರೆ ಸಾಕು ಇನ್ನೇನು ಬೇಡ ಎಂದು ಕೆಲವರು ಭಾವಿಸುತ್ತಾರೆ. ಆದರೆ ಇದು ತಪ್ಪು. ಇದೊಂದು ಸಂಪೂರ್ಣ ಭ್ರಮೆ. ನಿರಂಕುಶ ಅಧಿಕಾರಶಾಹಿಗಳು ಮತ್ತು ಭ್ರಷ್ಟಾಚಾರಿಗಳು ಮಾತ್ರ ಹೀಗೆ ಯೋಚಿಸಬಲ್ಲರು. ಹಾಗೆ ನೋಡಿದರೆ ಈ ಗೆಲುವುಗಳೆಲ್ಲಾ ಇದ್ದಕ್ಕಿದ್ದಂತೆ ಬಂದುವಲ್ಲ. ಪಕ್ಷದ ನೀತಿಯ ಅನ್ವಯಕ್ಕಾಗಿ ಉಗ್ರವಾದ ಹೋರಾಟವನ್ನು ನಡೆಸಿದುದರ ಫಲವಾಗಿ ಬಂದಿವೆ. ಗೆಲುವು ತನಗೆ ತಾನೇ ಬರುವುದಿಲ್ಲ- ಅದನ್ನು ಪಡೆಯಬೇಕು. ಪಕ್ಷದ ಸಾಮಾನ್ಯನೀತಿಗೆ ಅನುಕೂಲಕರವಾಗಿರುವ ಒಳ್ಳೆಯ ಗೊತ್ತುವಳಿಗಳು ಮತ್ತು ಘೋಷಣೆಗಳು ಕೇವಲ ಆರಂಭವನ್ನು ಸೂಚಿಸುತ್ತವಷ್ಟೆ. ಅವು ಗೆಲುವಿನ ಬಗ್ಗೆ ನಮಗಿರುವ ಆಸೆಯನ್ನು ತೋರಿಸುತ್ತವಷ್ಟೇ. ಹೊರತು ಅವೇ ಗೆಲುವು ಎನಿಸಲು ಸಾಧ್ಯವಿಲ್ಲ. ಸರಿಯಾದ ನೀತಿಯನ್ನು ರೂಪಿಸಿ, ಸಮಸ್ಯೆಗೆ ಸರಿಯಾದ ಪರಿಹಾರವನ್ನು ಕಂಡುಕೊಂಡ ಮೇಲೆ, ಕಾರ್ಯವನ್ನು ಹೇಗೆ ವ್ಯವಸ್ಥೆಗೊಳಿಸವುದು ಎಂಬುದರ ಮೇಲೆಯೇ ಗೆಲುವು ಅವಲಂಬಿತವಾಗಿರುವುದು. ಪಕ್ಷದ ನೀತಿಯನ್ನು ಅನ್ವಯಿಸುವುದಕ್ಕಾಗಿ ನಡೆಸುವ ಹೋರಾಟದ ಮೇಲೆ, ಉನ್ನತ ಸಮಿತಿಗಳ ತೀರ್ಮಾನಗಳನ್ನು ನಡೆಯಿಸುವುದರ ಬಗ್ಗೆ ಉಸ್ತುವಾರಿವಹಿಸುವ ವಿಧಾನದ ಮೇಲೆ ಗೆಲುವು ನಿಂತಿರುವುದು. ಇಲ್ಲದಿದ್ದರೆ, ಪಕ್ಷದ ಸರಿಯಾದ ನೀತಿ ಮತ್ತು ಸರಿಯಾದ ಪರಿಹಾರಗಳ ಬಗ್ಗೆ ತೀವ್ರವಾದ ಪೂರ್ವಾಗ್ರಹಗಳು ಮೂಡುವ ಅಪಾಯವಿರುತ್ತದೆ.

ಅಲ್ಲದೆ, ಸರಿಯಾದ ರಾಜಕೀಯ ನೀತಿಯನ್ನು ರೂಪಿಸಿದ ಮೇಲೆ ನಡೆಸುವ ಸಂಘಟನಾತ್ಮಕ ಕಾರ್ಯವೇ ಪ್ರತಿಯೊಂದನ್ನೂ, ರಾಜಕೀಯ ನೀತಿಯ ಹಣೆಬರಹವನ್ನು, ಅದರ ಗೆಲುವು ಸೋಲುಗಳನ್ನು ಸಹ ನಿರ್ಧರಿಸುತ್ತದೆ.

ಹಾಗೆ ನೋಡಿದರೆ, ಪಕ್ಷದ ನೀತಿಯನ್ನು ಅನ್ವಯಿಸಿ ಪಾಲಿಸುವ ದಾರಿಯಲ್ಲಿ ಅಡ್ಡ ಬಂದ ಎಲ್ಲ ತೊಂದರೆಗಳ ವಿರುದ್ಧ ನಡೆಸಿದ ನಿಷ್ಠುರವಾದ ಮತ್ತು ಕ್ರಮಬದ್ಧವಾದ ಹೋರಾಟದಿಂದಲೇ ಗೆಲುವನ್ನು ಸಾಧಿಸಲಾಗಿರುವುದು. ತೊಂದರೆಗಳ ಪರಿಹಾರಕ್ಕಾಗಿ ಪಕ್ಷವನ್ನು ಮತ್ತು ಕಾರ್ಮಿಕವರ್ಗವನ್ನು ಒಟ್ಟುಗೂಡಿಸುವುದರಿಂದ, ಈ ತೊಂದರೆಗಳ ನಿವಾರಣೆಗಾಗಿ ಹೋರಾಟವನ್ನು ಸಂಘಟಿಸಿದ್ದರಿಂದ, ಅದಕ್ಷರಾದ ಅಧಿಕಾರಿಗಳನ್ನು ತೆಗೆದು, ತೊಂದರೆಗಳ ವಿರುದ್ಧ ಹೋರಾಟ ನಡೆಸಬಲ್ಲ ಉತ್ತಮ ಅಧಿಕಾರಿಗಳನ್ನು ಆಯ್ಕೆ ಮಾಡಿದ್ದರಿಂದ ಗೆಲುವು ನಮ್ಮದಾಗಿದೆ.

ಈ ತೊಂದರೆಗಳು ಯಾವುವು? ಅವು ಎಲ್ಲಿ ಇರುತ್ತವೆ?

ನಮ್ಮ ಸಂಘಟನಾತ್ಮಕ ಕೆಲಸದಲ್ಲಿ, ನಮ್ಮ ಸಂಘಟನೆಯ ನಾಯಕತ್ವದಲ್ಲಿ ಈ ತೊಂದರೆಗಳು ತುಂಬಿಕೊಂಡಿವೆ. ಅವು ನಮ್ಮಲ್ಲೇ ಇವೆ. ನಮ್ಮ ನಾಯಕರಲ್ಲಿ, ನಮ್ಮ ಸಂಘಟನೆಗಳಲ್ಲಿ, ನಮ್ಮ ಪಕ್ಷದ, ರಾಜ್ಯದ, ಆರ್ಥಿಕತೆಯ, ಕಾರ್ಮಿಕಸಂಘದ ಆಡಳಿತದಲ್ಲಿ, ಯುವ ಕಮ್ಯುನಿಸ್ಟ್‌ಲೀಗಿನಲ್ಲಿ, ಮತ್ತು ಎಲ್ಲ ಇತರ ಸಂಘಟನೆಗಳಲ್ಲಿ ತೊಂದರೆಗಳು ತುಂಬಿವೆ.

ಆಡಳಿತ ಯಂತ್ರದಲ್ಲಿ ಅಧಿಕಾರಿಶಾಹಿ ಮತ್ತು ಭ್ರಷ್ಟಾಚಾರ, ನಿಜವಾದ ಮತ್ತು ಗಟ್ಟಿಯಾದ ನಾಯಕತ್ವದ ಬದಲು “ಸಾರ್ವತ್ರಿಕ ನಾಯಕತ್ವ”ದ ಬಗ್ಗೆ ಶುಷ್ಕ ಹರಟೆ, ನಮ್ಮ ಸಂಘಟನೆಗಳ ಕಾರ್ಯಸ್ವರೂಪ ಮತ್ತು ಪ್ರತಿಯೊಬ್ಬರೂ ಜವಾಬ್ದಾರಿ ಹೊರದಿರುವ ಕೊರತೆ, ವೇತನ ಸಮಾನತೆಯ ಕೊರತೆ, ಕೆಲಸದಲ್ಲಿ ವೈಯಕ್ತಿಕ ಜವಾಬ್ದಾರಿ ತೆಗೆದುಕೊಳ್ಳದಿರುವುದು, ತೀರ್ಮಾನಗಳನ್ನು ಪಾಲಿಸುವುದರ ಬಗ್ಗೆ ಕ್ರಮಬದ್ಧ ಉಸ್ತುವಾರಿ ನಡೆಸದಿರುವುದು, ಸ್ವವಿಮರ್ಶೆಗೆ ಭಯಪಡುವುದು ಇವೆಲ್ಲವೂ ನಮ್ಮ ತೊಂದರೆಗಳ ಮೂಲಗಳು. ನಮ್ಮ ತೊಂದರೆಗಳು ಈಗ ಇರುವುದು ಇಲ್ಲೇ.

ಗೊತ್ತುವಳಿಗಳು ಮತ್ತು ತೀರ್ಮಾನಗಳ ಮೂಲಕ ಈ ಕಷ್ಟಗಳನ್ನು ಪರಿಹರಿಸಬಹುದೆಂದು ಆಲೋಚಿಸುವುದು ತಪ್ಪು. ಪಕ್ಷ ಮತ್ತು ಸರಕಾರದ ತೀರ್ಮಾನಗಳಿಗೆ ಮಾತುಗಳಲ್ಲಿ ವಿಧೇಯತೆ ತೋರಿಸಿ, ಕ್ರಿಯೆಯಲ್ಲಿ ಅವುಗಳನ್ನು ಮೂಲೆಗೊತ್ತರಿಸುವ ಕಲೆಯಲ್ಲಿ ನಮ್ಮ ಅಧಿಕಾರಿಗಳು ತುಂಬಾ ಕಾಲದಿಂದ ನಿಷ್ಣಾತರಾಗಿದ್ದಾರೆ. ಆದ್ದರಿಂದ ಈ ತೊಂದರೆಗಳನ್ನು ನಿವಾರಿಸಬೇಕಾದರೆ, ನಮ್ಮ ಸಂಘಟನಾತ್ಮಕ ಕೆಲಸ ಮತ್ತು ಪಕ್ಷದ ರಾಜಕೀಯ ನೀತಿಯ ಅಗತ್ಯಗಳ ನಡುವೆ ಇರುವ ವ್ಯತ್ಯಾಸಕ್ಕೆ ಕೊನೆತರುವುದು ಅಗತ್ಯವಾಗಿತ್ತು. ರಾಷ್ಟ್ರೀಯ ಆರ್ಥಿಕತೆಯ ಎಲ್ಲರಂಗಗಳ ಸಂಘಟನಾ ನಾಯಕತ್ವದ ಮಟ್ಟವನ್ನು ರಾಜಕೀಯ ನಾಯಕತ್ವದ ಮಟ್ಟಕ್ಕೇರಿಸವುದು ಅಗತ್ಯವಾಗಿತ್ತು. ನಮ್ಮ ಸಂಘಟನಾತ್ಮಕ ಕೆಲಸವು, ಪಕ್ಷದ ತೀರ್ಮಾನಗಳು ಮತ್ತು ರಾಜಕೀಯ ಘೋಷಣೆಗಳನ್ನು ಖಚಿತವಾಗಿ ಅನ್ವಯಕ್ಕೆ ತರುತ್ತದೆ ಎಂಬುದರ ಬಗ್ಗೆ ಗಮನ ನೀಡುವುದು ಅಗತ್ಯವಾಗಿತ್ತು.

ತೀರ್ಮಾನಗಳನ್ನು ಪಾಲಿಸಿ, ಪೂರೈಸುವುದರ ಬಗ್ಗೆ ಹತ್ತಿರದಿಂದ ಉಸ್ತುವಾರಿ ನಡೆಸಬೇಕಾದ ಮುಂದಿನ ಕರ್ತವ್ಯದ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ.

ಅಧಿಕಾರಿಶಾಹಿ ಮತ್ತು ಕಛೇರಿ ಏಕತಾನತೆಯ ವಿರುದ್ಧ ನಡೆಸುವ ಹೋರಾಟದಲ್ಲಿ, ತೀರ್ಮಾನಗಳ ಪಾಲನೆಯ ಬಗ್ಗೆ ಉಸ್ತುವಾರಿ ನಡೆಸುವ ಕಾರ್ಯದ ಸರಿಯಾದ ವ್ಯವಸ್ಥೆಯು ನಿರ್ಣಯಕಾರಿ ಪ್ರಾಮುಖ್ಯವನ್ನು ಪಡೆದಿದೆ. ಉನ್ನತ ಅಂಗಗಳ ತೀರ್ಮಾನಗಳನ್ನು ಪಾಲಿಸಲಾಗುತ್ತಿದೆಯೇ ಅಥವಾ ಅಧಿಕಾರಿಗಳು ಮತ್ತು ಭ್ರಷ್ಟಾಚಾರಿಗಳು ಅವುಗಳನ್ನು ಮೂಲೆಗೊತ್ತರಿಸುತ್ತಿದ್ದಾರೆಯೆ? ಅವುಗಳನ್ನು ಶುದ್ಧವಾಗಿ ಪಾಲಿಸಲಾಗುತ್ತಿದೆಯೇ ಅಥವಾ ವಿಕೃತಗೊಳಿಸಲಾಗುತ್ತಿದೆಯೇ? ಆಡಳಿತಯಂತ್ರವು ಕರ್ತವ್ಯ ಜ್ಞಾನದೊಡನೆ ಬೋಲ್ಷೆವಿಕ್ ವಿಧಾನದಲ್ಲಿ ಕೆಲಸಮಾಡುತ್ತಿದೆಯೇ ಅಥವಾ ಅದು ಕ್ರೂರಮುಷ್ಟಿಯೊಳಗೆ ನಡೆಯುತ್ತಿದೆಯೇ? ತೀರ್ಮಾನಗಳ ಪೂರೈಕೆಯ ಬಗ್ಗೆ ಸರಿಯಾದ ಉಸ್ತುವಾರಿಯನ್ನು ನೋಡಿಕೊಂಡಾಗ ಮಾತ್ರ ಈ ಅಂಶಗಳು ಪ್ರಾಮಾಣಿಕವಾಗಿ ಹೊರಬೀಳುತ್ತವೆ. ಆಡಳಿತ ಯಂತ್ರವು ಹೇಗೆ ಕೆಲಸಮಾಡುತ್ತಿದೆಯೆಂಬುದನ್ನು ಯಾವುದೇ ಕ್ಷಣದಲ್ಲಿ ತೋರಿಸಬಲ್ಲ, ಅಧಿಕಾರಿಶಾಹಿಗಳನ್ನು ಭ್ರಷ್ಟಾಚಾರಿಗಳನ್ನು ಪೂರ್ಣವಾಗಿ ಬಯಲಿಗೆಳೆಯಬಲ್ಲ ಸರ್ಚ್‌ಲೈಟಿನ ಹಾಗೆ, ತೀರ್ಮಾನಗಳ ಪೂರೈಕೆಯ ಬಗ್ಗೆ ನಡೆಸುವ ಉಸ್ತುವಾರಿ ಸಹಾಯ ಮಾಡುತ್ತದೆ. ತೀರ್ಮಾನಗಳ ಪೂರೈಕೆಯ ಬಗ್ಗೆ ಸರಿಯಾಗಿ ವ್ಯವಸ್ಥೆಗೊಂಡ ಉಸ್ತುವಾರಿ ಇಲ್ಲದಿರುವುದೇ ನಮ್ಮ ಮುಕ್ಕಾಲುಪಾಲು ದೋಷಗಳು ಮತ್ತು ವೈಫಲ್ಯಗಳಿಗೆ ಕಾರಣ ಎಂದು ಹೇಳಬಹುದು. ಅಂಥ ವ್ಯವಸ್ಥೆಯೊಂದು ಇದ್ದಿದ್ದರೆ ಈ ದೋಷಗಳು ಮತ್ತು ವೈಫಲ್ಯಗಳನ್ನು ನಿವಾರಿಸಬಹುದಿತ್ತು ಎಂಬುದರಲ್ಲಿ ಸಂದೇಹವಿಲ್ಲ.

ತೀರ್ಮಾನಗಳ ಪೂರೈಕೆಯ ಉಸ್ತುವಾರಿಯು ತನ್ನ ಉದ್ದೇಶವನ್ನು ಸಾಧಿಸಬೇಕಾದರೆ ಎರಡು ಅಂಶಗಳು ಅಗತ್ಯವಾಗುತ್ತವೆ. ಮೊದಲನೆಯದಾಗಿ, ಪೂರೈಕೆಯ ಉಸ್ತುವಾರಿಯನ್ನು ಎಂದೋ ಬಿಟ್ಟು ಬಿಟ್ಟು ಮಾಡದೆ, ಕ್ರಮಬದ್ಧವಾಗಿ ಮಾಡಬೇಕು. ಎರಡನೆಯದಾಗಿ, ಪಕ್ಷ, ರಾಜ್ಯ ಮತ್ತು ಆರ್ಥಿಕ ಸಂಘಟನೆಗಳಲ್ಲಿ ಪೂರೈಕೆಯನ್ನು ಪರೀಕ್ಷಿಸುವವರು ಎರಡನೇ ದರ್ಜೆ ಜನಗಳಾಗಿರದೆ, ಸಂಬಂಧಪಟ್ಟ ಸಂಘಟನೆಗಳ ನಾಯಕರೂ, ಸಾಕಷ್ಟು ಅಧಿಕಾರವುಳ್ಳವರೂ ಆಗಿರಬೇಕು......

ಸಂಘಟನಾ ಕಾರ್ಯದಲ್ಲಿ ನಮ್ಮ ಕರ್ತವ್ಯಗಳು : (1) ಪಕ್ಷದ ರಾಜಕೀಯ ನೀತಿಯ ಅಗತ್ಯಗಳಿಗೆ ಅನುಸಾರವಾಗಿ ಸಂಘಟನಾ ಕಾರ್ಯವನ್ನು ಅಳವಡಿಸುವುದನ್ನು ಮುಂದುವರೆಸುವುದು. (2) ಸಂಘಟನಾತ್ಮಕ ನಾಯಕತ್ವವನ್ನು ರಾಜಕೀಯ ನಾಯಕತ್ವದ ಮಟ್ಟಕ್ಕೆ ಏರಿಸುವುದು. (3) ಪಕ್ಷದ ರಾಜಕೀಯ ಘೋಷಣೆಗಳು ಮತ್ತು ತೀರ್ಮಾನಗಳ ಅನ್ವಯವನ್ನು ಖಚಿತಗೊಳಿಸುವ ಶಕ್ತಿ ವ್ಯಕ್ತಿ ಸಮಾನವಾಗಿ ಸಂಘಟನಾ ನಾಯಕತ್ವದ ಕೆಲಸವೂ ಇರುವಂತೆ ಗಮನಿಸುವುದು.

“ತಂತ್ರ ಎಲ್ಲವನ್ನೂ ನಿರ್ಧರಿಸುತ್ತದೆ” ಎಂಬ ಹಳೆಯ ಘೋಷಣೆಯು ಈಗಾಗಲೇ ಕಳೆದು ಹೋದ ಕಾಲದ, ತಂತ್ರದ ಅಭಾವವಿದ್ದ ಕಾಲದ ಪ್ರತಿಬಿಂಬ ಈಗ ಅದರ ಬದಲು “ಕಾರ್ಯಕರ್ತರು ಎಲ್ಲವನ್ನೂ ನಿರ್ಧರಿಸುತ್ತಾರೆ” ಎಂಬ ಹೊಸ ಘೋಷಣೆಯನ್ನು ಜಾರಿಗೆ ತರಬೇಕು. ಈಗ ಅದೇ ಮುಖ್ಯ ಅಂಗ.

ನಮ್ಮ ಜನರು ಈ ಹೊಸ ಘೋಷಣೆಯ ಮಹತ್ತರ ವೈಶಿಷ್ಟ್ಯವನ್ನು ಪೂರ್ಣವಾಗಿ ಗ್ರಹಿಸಿದ್ದಾರೆಂದು ಹೇಳಬಹುದೆ ? ನಾನು ಹಾಗೆ ಹೇಳಲಾರೆ. ಹಾಗೆ ಇದ್ದಿದ್ದರೆ, ನಾವೀಗ ಪದೇ ಪದೇ ಗಮನಿಸುವ ಹಾಗೆ, ಜನತೆಯ ಬಗ್ಗೆ, ಕಾರ್ಯಕರ್ತರ ಬಗ್ಗೆ, ಕಾರ್ಮಿಕರ ಬಗ್ಗೆ ಇಂತಹ ಉಗ್ರಭಾವನೆ ಕಂಡುಬರುತ್ತಿರಲಿಲ್ಲ. ನಮ್ಮ ನಾಯಕರೆಲ್ಲರೂ ನಮ್ಮ ಕೆಲಸಗಾರರು ಅವರೆಂಥ “ದೊಡ್ಡ”ವರೇ ಆಗಿರಲಿ “ಸಣ್ಣ”ವರೇ ಆಗಿರಲಿ, ಅವರು ಯಾವ ರಂಗದಲ್ಲಾದರೂ ಇರಲಿ, ಅವರನ್ನು ಸದಾ ಬೆಳೆಸುತ್ತಿರಬೇಕು, ಅವರಿಗೆ ಬೆಂಬಲಬೇಕಾದಾಗ ಸಹಾಯಮಾಡಬೇಕು, ಅವರು ತಮ್ಮ ಪ್ರಥಮ ಗೆಲುವುಗಳನ್ನು ತೋರಿಸಿದಾಗ ಪ್ರೋತ್ಸಾಹಿಸಬೇಕು, ಅವರನ್ನು ಮುನ್ನಡೆಸಬೇಕು ಎಂದು “ಕಾರ್ಯಕರ್ತರೇ ಎಲ್ಲವನ್ನೂ ನಿರ್ಧರಿಸುತ್ತಾರೆ” ಎಂಬ ಘೋಷಣೆಯು ಹೇಳುತ್ತದೆ. ಹಾಗಿದ್ದರೂ ಕ್ರಿಯೆಯಲ್ಲಿ ಮಾತ್ರ ಕೆಲಸಗಾರರ ಬಗ್ಗೆ ಅಂತಃಕರಣವಿಲ್ಲದ, ಅಧಿಕಾರಶಾಹಿಯಾದ ಮತ್ತು ಉಗ್ರವಾದ ದೃಷ್ಟಿಕೋನವನ್ನು ಅನೇಕ ಪ್ರಸಂಗಗಳಲ್ಲಿ ಕಾಣುತ್ತೇವೆ. ಜನರನ್ನು ಪರೀಕ್ಷಿಸಿ ಹಾಗೆ ಪರೀಕ್ಷಿಸಿದ ನಂತರವೇ ಅವರನ್ನು ಒಂದು ಸ್ಥಾನದಲ್ಲಿಡುವ ಬದಲು, ಅಧಿಕಾರ ಸ್ಥಾನಗಳಿಂದ ಆಟಿಕೆಗಳ ಹಾಗೆ ಅವರನ್ನು ಬದಲಾಯಿಸುತ್ತಿರುವುದು ಏಕೆ ಎಂಬುದನ್ನು ಇದು ವಿವರಿಸುತ್ತದೆ. ಜನತೆ ಈಗ ಯಂತ್ರಗಳ ಮೌಲ್ಯವನ್ನು ಅರಿತುಕೊಳ್ಳಲಾರಂಭಿಸಿದ್ದಾರೆ. ನಮ್ಮ ಗಿರಣಿಗಳು ಮತ್ತು ಕಾರ್ಖಾನೆಗಳಲ್ಲಿ ಎಷ್ಟು ಯಂತ್ರಗಳಿವೆ ಎಂಬುದರ ಬಗ್ಗೆ ವರದಿಗಳನ್ನು ಕಳಿಸುತ್ತಾರೆ. ಆದರೆ, ನಿಗದಿಯಾದ ಅವಧಿಯಲ್ಲಿ ನಾವು ಎಷ್ಟು ಜನರಿಗೆ ತರಬೇತಿ ನೀಡಿದ್ದೇವೆ ಜನತೆ ಬೆಳೆಯಲು, ಕೆಲಸಕ್ಕೆ ಹೊಂದಿಕೊಳ್ಳಲು ನಾವು ಹೇಗೆ ಸಹಾಯ ಮಾಡಿದ್ದೇವೆ ಎಂಬುದರ ಬಗ್ಗೆ ಅಷ್ಟೇ ಉತ್ಸಾಹದಿಂದ ಬಂದ ಒಂದೇ ಒಂದು ವರದಿಯನ್ನೂ ನಾನು ನೋಡಿಲ್ಲ. ಇದನ್ನು ಹೇಗೆ ವಿವರಿಸುವುದು ? ಜನತೆಗೆ, ಕಾರ್ಮಿಕರಿಗೆ, ಕಾರ್ಯಕರ್ತರಿಗೆ ಬೆಲೆ ಕೊಡಲು ನಾವಿನ್ನೂ ಕಲಿತಿಲ್ಲ ಎಂದೇ ಇದನ್ನು ವಿವರಿಸಬೇಕು.

ಒಂದಾನೊಂದು ಕಾಲದಲ್ಲಿ ಗಡೀಪಾರಿನಲ್ಲಿದ್ದ ನಾನು ಸೈಬೀರಿಯಾದಲ್ಲಿ ಕಂಡ ಘಟನೆಯನ್ನು ನೆನೆಸಿಕೊಳ್ಳುತ್ತಿದ್ದೇನೆ. ಆಗ ವಸಂತಕಾಲವಾಗಿದ್ದು ಪ್ರವಾಹ ಗಳು ಇದ್ದವು. ಅಗಾಧವಾಗಿ ತುಂಬಿಕೊಂಡಿದ್ದ ನದಿಯು ಸೆಳೆದುಕೊಂಡು ಹೋಗಿದ್ದ ಮರದ ದಿಮ್ಮಿಗಳನ್ನು ವಾಪಸ್ಸು ಎಳೆದು ತರಲು 30 ಜನರು ನದಿಗೆ ಹೊರಟರು. ಸಂಜೆಯ ವೇಳೆಗೆ ಅವರು ಹಳ್ಳಿಗೆ ವಾಪಾಸ್ಸಾದರು. ಆದರೆ ಒಬ್ಬ ಕಾಮ್ರೇಡ್ ತಪ್ಪಿಸಿಕೊಂಡುಬಿಟ್ಟಿದ್ದ. ಆ ಮೂವತ್ತನೇ ಮನುಷ್ಯ ಎಲ್ಲಿ ಎಂದು ಕೇಳಿದಾಗ ಅವರೆಲ್ಲರೂ ನಿರ್ವಿಕಾರವಾಗಿ “ಅಲ್ಲೇ ಇದ್ದಾನೆ” ಎಂದು ಉತ್ತರಿಸಿದರು. “ಅಲ್ಲೇ ಇದ್ದಾನೆ ಎಂದರೇನರ್ಥ” ಎಂದು ನಾನು ಕೇಳಿದ್ದಕ್ಕೆ ಅವರು ಅದೇ ನಿರ್ವಿಕಾರತೆಯಿಂದ “ಅದನ್ನೇನು ಕೇಳುವುದು, ಅವನು ಮುಳುಗಿದ” ಎಂದರು. ನಂತರ ಅವರಲ್ಲೊಬ್ಬ ಗಡಿಬಿಡಿಯಿಂದ ಎದ್ದು “ನಾನು ಕುದುರೆಗೆ ನೀರು ಕುಡಿಸಬೇಕು” ಎಂದು ಹೋದ. ನಿಮಗೆ ಮನುಷ್ಯರ ಬಗ್ಗೆಗಿಂತಾ ಪ್ರಾಣಿಗಳ ಬಗ್ಗೆ ಹೆಚ್ಚು ಕಳಕಳಿ ಇದೆ ಎಂದು ನಾನು ಅವರಿಗೆ ಅಂದಾಗ, ಒಬ್ಬ ಎಲ್ಲರ ಒಪ್ಪಿಗೆಯಲ್ಲಿ ಹೇಳಿದ : “ಮನುಷ್ಯರ ಬಗ್ಗೆ ಯಾಕೆ ಕಳಕಳಿ ತೋರಿಸಬೇಕು ? ಯಾವಾಗಬೇಕಾದರೂ ಮನುಷ್ಯರನ್ನು ನಾವು ಸೃಷ್ಟಿಸಬಹುದು. ಆದರೆ ಕುದುರೆಯನ್ನು ... ಒಂದು ಕುದುರೆ ಮಾಡಿರಿ ನೋಡೋಣ.”

ತುಂಬ ವಿಶಿಷ್ಟವಲ್ಲದಿದ್ದರೂ ತುಂಬ ಅರ್ಥಪೂರ್ಣವಾದ ಪ್ರಸಂಗ ಇಲ್ಲಿದೆ. ಈಗ ನಾನು ಹೇಳಿದ ಸೈಬೀರಿಯಾದ ಪ್ರಸಂಗದಲ್ಲಿರುವ ಹಾಗೆಯೇ ನಮ್ಮ ನಾಯಕರೂ ಜನತೆಯ ಬಗ್ಗೆ, ಕಾರ್ಯಕರ್ತರ ಬಗ್ಗೆ ನಿರ್ವಿಕಾರವಾಗಿರುತ್ತಾರೆ. ಜನತೆಗೆ ಬೆಲೆಕೊಡಲು ಅವರಿಗೆ ಅಸಾಧ್ಯವಾಗಿರುವುದು. ಈ ಪ್ರಸಂಗದಲ್ಲಿ ಮನುಷ್ಯ ಮನುಷ್ಯನ ಬಗ್ಗೆ ತೋರಿಸುವ ವಿಚಿತ್ರ ದೃಷ್ಟಿಕೋನದ ಮುಂದುವರಿಕೆಯೇ ಆಗಿದೆ.

ಆದ್ದರಿಂದ ಕಾಮ್ರೇಡುಗಳೇ, ಜನತೆಯಲ್ಲಿರುವ ಕೊರತೆಗಳನ್ನು ನಿವಾರಿಸಬೇಕಾದರೆ, ನಮ್ಮ ದೇಶಕ್ಕೆ ಅಗತ್ಯವಾಗಿರುವಷ್ಟು ಕಾರ್ಯಕರ್ತರನ್ನು ಒದಗಿಸಿ, ಅವರು ತಂತ್ರವಿಜ್ಞಾನದಲ್ಲಿ ಮುಂದುವರೆದು ದೇಶವನ್ನು ಮುನ್ನಡೆಸಬೇಕಾದರೆ, ಮೊದಲಿಗೆ ನಾವು ಜನತೆಗೆ ಬೆಲೆ ಕೊಡುವುದನ್ನು, ಕಾರ್ಯಕರ್ತರಿಗೆ ಬೆಲೆ ಕೊಡುವುದನ್ನು, ನಮ್ಮ ಗುರಿಗಾಗಿ ದುಡಿಯಲು ಸಮರ್ಥನಾಗಿರುವ ಪ್ರತಿಯೊಬ್ಬ ಕಾರ್ಮಿಕನಿಗೆ ಬೆಲೆಕೊಡುವುದನ್ನು ಕಲಿಯಬೇಕು.

ಜಗತ್ತಿನಲ್ಲಿರುವ ಎಲ್ಲ ಬಂಡವಾಳಗಳಲ್ಲಿ ಅಮೂಲ್ಯವಾದದ್ದು ಮತ್ತು ನಿರ್ಣಾಯಕವಾದದ್ದು ಜನತೆ, ಕಾರ್ಯಕರ್ತರೇ ಎಂಬುದನ್ನು ತಿಳಿಯಬೇಕಾದ ಕಾಲ ಬಂದಿದೆ. ನಮ್ಮ ಸದ್ಯದ ಪರಿಸ್ಥಿತಿಗಳಲ್ಲಿ ‘ಕಾರ್ಯಕರ್ತರೇ ಎಲ್ಲವನ್ನೂ ನಿರ್ಧರಿಸುತ್ತಾರೆ’ ಎಂಬುದನ್ನು ನಾವು ಅರಿತುಕೊಳ್ಳಬೇಕು. ಕೈಗಾರಿಕೆ, ವ್ಯವಸಾಯ, ಸಾರಿಗೆ ಮತ್ತು ಸೈನ್ಯಗಳಲ್ಲಿ ಒಳ್ಳೆಯ ಸಂಖ್ಯೆಯಲ್ಲಿ ಕಾರ್ಯಕರ್ತರು ಇದ್ದರೆ ನಮ್ಮ ದೇಶ ಅಜೇಯವಾಗುತ್ತದೆ. ಅಂಥ ಕಾರ್ಯಕರ್ತರು ಇಲ್ಲದಿದ್ದರೆ, ನಾವು ಎರಡೂಕಾಲಿನ ಕುಂಟರಾಗುತ್ತೇವೆ.

(5ನೇ ಪುಟ ನೋಡಿ)

ಪಕ್ಷದ ಸಂಘಟನೆಯನ್ನು ಕುರಿತು

(4ನೇ ಪುಟದಿಂದ)

ಒಂದು ಸರಿಯಾದ ರಾಜಕೀಯ ನೀತಿಯು ಬರೇ ಘೋಷಣೆಯಾಗಿ ಮಾತ್ರ ಬೇಡ. ಅದು ಪರಿಣಾಮಕಾರಿಯಾಗಿ ಪಾಲಿಸುವ ಅಂಶವಾಗಬೇಕು. ಆದರೆ ಒಂದು ಸರಿಯಾದ ರಾಜಕೀಯ ನೀತಿಯನ್ನು ಪರಿಣಾಮಕಾರಿಯಾಗಿ ಪಾಲಿಸಬೇಕಾದರೆ, ಪಕ್ಷದ ರಾಜಕೀಯ ನೀತಿಯನ್ನು ಅರ್ಥಮಾಡಿಕೊಳ್ಳಬಲ್ಲ ಕಾರ್ಯಕರ್ತರು ಜನರುಬೇಕು. ತಮ್ಮದೇ ನೀತಿ ಎಂದು ಅಂಗೀಕರಿಸಬಲ್ಲ, ಅದನ್ನು ಪರಿಣಾಮಕಾರಿಯಾಗಿ ಒಯ್ಯಲು ತಯಾರಾಗಿರುವ, ಕಾರ್ಯಾಚರಣೆಗೆ ಅದನ್ನು ತರಲು ಸಮರ್ಥರಾದ, ಅದಕ್ಕೆ ಉತ್ತರಿಸಬಲ್ಲ, ಅದನ್ನು ರಕ್ಷಿಸಿ ಸಮರ್ಥಿಸಿಕೊಳ್ಳಬಲ್ಲ ಮತ್ತು ಅದಕ್ಕಾಗಿ ಹೋರಾಡಬಲ್ಲ ಕಾರ್ಯಕರ್ತರು ಮತ್ತು ಜನರು ಬೇಕು. ಇಲ್ಲದಿದ್ದರೆ ಒಂದು ಸರಿಯಾದ ರಾಜಕೀಯ ನೀತಿಯು ಬರೇ ಹೆಸರಿನಲ್ಲಿ ಮಾತ್ರ ಉಳಿದುಕೊಳ್ಳುವ ಅಪಾಯವಿದೆ.

ಈಗ ಸರಿಯಾದ ಕಾರ್ಯಕರ್ತರನ್ನು ಆಯ್ಕೆ ಮಾಡುವ, ಅವರಿಗೆ ತರಬೇತಿ ನೀಡುವ, ಹೊಸಜನರಿಗೆ ಬಡ್ತಿ ನೀಡುವ, ಕಾರ್ಯಕರ್ತರನ್ನು ವಿತರಣೆ ಮಾಡುವ, ಮತ್ತು ಸಾಧಿಸಿದ ಕೆಲಸದ ಆಧಾರದ ಮೇಲೆ ಕಾರ್ಯಕರ್ತರನ್ನು ಪರೀಕ್ಷಿಸುವ ಪ್ರಶ್ನೆಗಳು ಹುಟ್ಟುತ್ತವೆ.

ಸರಿಯಾದ ಕಾರ್ಯಕರ್ತರ ಆಯ್ಕೆ ಎಂದರೇನು?

ಸರಿಯಾದ ಕಾರ್ಯಕರ್ತರ ಆಯ್ಕೆ ಎಂದರೆ, ಅನೇಕ ಜನ ಸಹಾಯಕರನ್ನು ಗುಡ್ಡೆಹಾಕಿಕೊಂಡು ಒಂದು ಕಛೇರಿ ಸ್ಥಾಪಿಸಿ, ಆದೇಶದ ಮೇಲೆ ಆದೇಶ ನೀಡುವುದು ಎಂದು ಅರ್ಥವಲ್ಲ, ಅಥವಾ ಒಬ್ಬರ ಅಧಿಕಾರವನ್ನು ದೂಷಿಸುವುದು, ಕ್ರಮ ಅಥವಾ ಕಾರಣವಿಲ್ಲದೆ ನೂರಿಪ್ಪತ್ತು ಜನರನ್ನು ಆ ಕೆಲಸದಿಂದ ಈ ಕೆಲಸಕ್ಕೆ ವರ್ಗಾಯಿಸುವುದು ಮತ್ತು ಕೊನೆಯಿಲ್ಲದ "ಪುನರ್ರಚನೆ"ಗಳನ್ನು ಮಾಡುವುದು ಎಂದೂ ಅರ್ಥವಲ್ಲ.

ಕಾರ್ಯಕರ್ತರ ಸರಿಯಾದ ಆಯ್ಕೆ ಎಂದರೆ:

ಮೊದಲನೆಯದಾಗಿ, ಕಾರ್ಯಕರ್ತರು ಪಕ್ಷದ ಮತ್ತು ರಾಜ್ಯದ ಚಿನ್ನದ ನಿಧಿ ಎನ್ನುವಹಾಗೆ ಅವರನ್ನು ಕಾಪಾಡುವುದು, ಗೌರವಿಸುವುದು.

ಎರಡನೆಯದಾಗಿ, ಕಾರ್ಯಕರ್ತರನ್ನು ಅರ್ಥಮಾಡಿಕೊಂಡು, ಎಚ್ಚರಿಕೆಯಿಂದ ಅವರ ಗುಣ ವಿಶೇಷಗಳು ಮತ್ತು ಕೊರತೆಗಳನ್ನು ಅಭ್ಯಾಸ ಮಾಡುವುದು, ಯಾವ ಕೆಲಸದಲ್ಲಿ ಯಾವ ಕಾರ್ಯಕರ್ತನ ಶಕ್ತಿಗಳು ಬೆಳೆಯಬಲ್ಲವು ಎಂಬುದನ್ನು ತಿಳಿದುಕೊಳ್ಳುವುದು.

ಮೂರನೆಯದಾಗಿ, ಎಚ್ಚರಿಕೆಯಿಂದ ಕಾರ್ಯಕರ್ತರನ್ನು ಮುಂದಕ್ಕೆ ತರುವುದು, ಪ್ರತಿಯೊಬ್ಬ ಪ್ರತಿಭಾವಂತ ಕೆಲಸಗಾರನೂ ಪ್ರಗತಿಹೊಂದಲು ಸಹಾಯಮಾಡುವುದು, ಕೆಲಸಗಾರರ ಜೊತೆ ಸಹನೆಯಿಂದ "ಹೆಣಗ" ಬೇಕಾದ ಕಾಲವನ್ನು ಶಪಿಸದಿರುವುದು ಮತ್ತು ಅವರ ಬೆಳವಣಿಗೆಯನ್ನು ತ್ವರಿತಗೊಳಿಸುವುದು.

ನಾಲ್ಕನೆಯದಾಗಿ, ತಕ್ಕ ಸಮಯದಲ್ಲಿ ಹೊಸ ಮತ್ತು ಯುವ ಕಾರ್ಯಕರ್ತರಿಗೆ ಧೈರ್ಯವಾಗಿ ಬಡ್ತಿ ನೀಡುವುದು. ಆ ಮೂಲಕ, ಅವರು ತಮ್ಮ ಹಳೆಯ ಸ್ಥಾನಗಳಲ್ಲೇ ಸ್ಥಗಿತರಾಗಿ ನಿಲ್ಲದಿರುವಂತೆ ಮಾಡುವುದು.

ಐದನೆಯದಾಗಿ, ತಾನು ಸರಿಯಾದ ಸ್ಥಾನದಲ್ಲಿ ಇದ್ದೇನೆ ಎಂದು ಪ್ರತಿಯೊಬ್ಬ ಕಾರ್ಯಕರ್ತನೂ ಭಾವಿಸುವ ಹಾಗೆ ಕೆಲಸಗಾರರಿಗೆ ಸ್ಥಳನಿರ್ದೇಶ ಮಾಡುವುದು. ಇದರಿಂದ, ಪ್ರತಿಯೊಬ್ಬನೂ ತನ್ನ ವೈಯಕ್ತಿಕ ಶಕ್ತಿ ಸಾಮರ್ಥ್ಯಗಳು ಇರುವಷ್ಟು ಮಟ್ಟಿಗೆ ನಮ್ಮ ಗುರಿಗೆ ತನ್ನ ಗರಿಷ್ಠ ಮಟ್ಟದಲ್ಲಿ ಸಹಾಯ ಮಾಡಬಹುದು. ಯಾವ ರಾಜಕೀಯ ನೀತಿಯನ್ನು ಪಾಲಿಸುವುದಕ್ಕಾಗಿ ಈ ಕಾರ್ಯದ ಹಂಚಿಕೆಯನ್ನು ರೂಪಿಸಲಾಗಿದೆಯೋ, ಆ ನೀತಿಯ ಅಗತ್ಯಗಳಿಗೆ ತಕ್ಕ ಹಾಗೆ ಕಾರ್ಯಕರ್ತರಿಗೆ ಕೆಲಸವನ್ನು ಹಂಚಬೇಕು.

ಈ ಅಂಶಕ್ಕೆ ಸಂಬಂಧಿಸಿದ ಹಾಗೆ, ಹೊಸ ಮತ್ತು ಯುವಕಾರ್ಯಕರ್ತರಿಗೆ ಧೈರ್ಯವಾಗಿ ಮತ್ತು ತಕ್ಕ ಸಮಯದಲ್ಲಿ ಬಡ್ತಿ ನೀಡುವುದು ತುಂಬ ಪ್ರಮುಖವಾದ ವಿಚಾರವಾಗಿದೆ. ಈ ಬಗ್ಗೆ ನಮ್ಮ ಜನರು ಇನ್ನೂ ಸ್ಪಷ್ಟತೆ ಪಡೆದಿಲ್ಲವೆಂದೇ ನನಗನ್ನಿಸುತ್ತದೆ. ಜನರನ್ನು ಆಯ್ಕೆಮಾಡುವಾಗ ಮುಖ್ಯವಾಗಿ ಹಳೆಯ ಕಾರ್ಯಕರ್ತರನ್ನೇ ಅವಲಂಬಿಸಬೇಕೆಂದು ಕೆಲವರು ಆಲೋಚಿಸುತ್ತಾರೆ. ಮತ್ತೆ ಕೆಲವರು ನಾವು ಹೊಸ ಕಾರ್ಯಕರ್ತರನ್ನೇ ಅವಲಂಬಿಸಬೇಕೆಂದು ಭಾವಿಸುತ್ತಾರೆ. ಇವೆರಡೂ ತಪ್ಪು ವಿಚಾರಗಳು ಎಂದೆನ್ನಿಸುತ್ತದೆ.

ಹಳೆಯ ಕಾರ್ಯಕರ್ತರು ಪಕ್ಷದ ಮತ್ತು ರಾಜ್ಯದ ಒಂದು ಒಳ್ಳೆಯ ಸಂಪತ್ತು ಎನ್ನುವುದೇನೋ ಸರಿ. ಹೊಸಕಾರ್ಯಕರ್ತರಿಗೆ ಇಲ್ಲದಿರುವ, ನಾಯಕತ್ವದ ಅಗಾಧ ಅನುಭವ, ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನೀತಿಗಳ ತರಬೇತಿ, ಘಟನೆಗಳ ಬಗ್ಗೆ ತಿಳುವಳಿಕೆ ಮತ್ತು ಕೆಲಸ ಮಾಡುವ ಸಾಮರ್ಥ್ಯಗಳು ಅವರಲ್ಲಿ ಇರುತ್ತವೆ. ಆದರೆ ಮೊದಲನೆಯದಾಗಿ, ಹಳೆಯ ಕಾರ್ಯಕರ್ತರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲ, ಅಗತ್ಯಕ್ಕೆ ತಕ್ಕಷ್ಟು ಇಲ್ಲ ಮತ್ತು ನಿಸರ್ಗದ ನಿಯಮಗಳಿಗನುಸಾರವಾಗಿ ಅವರಲ್ಲಿ ಅನೇಕರನ್ನು ಕೆಲಸಕ್ಕೆ ತೆಗೆದುಕೊಳ್ಳುವುದು ಅಸಾಧ್ಯವಾಗಿದೆ. ಎರಡನೆಯದಾಗಿ, ಅನೇಕ ಹಳೆಯ ಕಾರ್ಯಕರ್ತರು ಹಿಂದಿನದರ ಬಗ್ಗೆಯೇ ಸದಾ ಕಣ್ಣಿಟ್ಟಿರುತ್ತಾರೆ, ಹಳೆಯದಕ್ಕೇ ಅಂಟಿಕೊಳ್ಳುತ್ತಾರೆ, ಹಳೆಯ ರೂಢಿಮಾರ್ಗದಲ್ಲೇ ನಿಲ್ಲುತ್ತಾರೆ, ಅಲ್ಲದೆ ಜೀವನದಲ್ಲಿ ಹೊಸದನ್ನು ಗಮನಿಸಲು ವಿಫಲರಾಗುತ್ತಾರೆ. ಇದನ್ನೇ ಹೊಸದರ ಕಲ್ಪನೆಯನ್ನು ಕಳೆದುಕೊಳ್ಳುವುದು ಎನ್ನುತ್ತಾರೆ. ಇದೊಂದು ಗಂಭೀರವಾದ ಮತ್ತು ಅಪಾಯಕಾರಿಯಾದ ಕೊರತೆ.

ಯುವ ಕಾರ್ಯಕರ್ತರಿಗೆ ಹಳೆಯ ಕಾರ್ಯಕರ್ತರಿಗಿರುವ ಅನುಭವ, ತರಬೇತಿ, ಘಟನೆಗಳ ಬಗ್ಗೆ ತಿಳುವಳಿಕೆ, ಕೆಲಸಮಾಡುವ ಸಾಮರ್ಥ್ಯ ಇವುಗಳು ಇರುವುದಿಲ್ಲವೇನೋ ನಿಜ. ಆದರೆ, ಮೊದಲನೆಯದಾಗಿ ಯುವಕಾರ್ಯಕರ್ತರೇ ಬಹುಸಂಖ್ಯಾತರಾಗಿದ್ದಾರೆ. ಅವರು ಇನ್ನೂ ಯುವಕರಾಗಿರುವುದರಿಂದ ಚಲಾವಣೆಯಲ್ಲಿಲ್ಲದೆ ಹೋಗುವ ಅಪಾಯವಿರುವುದಿಲ್ಲ. ಅವರಿಗೆ ಹೊಸದರ ಕಲ್ಪನೆ ಅಗಾಧವಾಗಿ ಇರುತ್ತದೆ. ಪ್ರತಿ ಬೋಲ್ಷೆವಿಕ್ ಕೆಲಸಗಾರನಿಗೂ ಇದೊಂದು ಅಮೂಲ್ಯ ಗುಣವಾಗಿರುತ್ತದೆ. ಅವರು ಎಷ್ಟುಬೇಗ ಬೆಳೆದು, ಜ್ಞಾನವನ್ನು ಪಡೆಯುತ್ತಾರೆಂದರೆ, ಎಷ್ಟು ಉತ್ಸಾಹದಿಂದ ಮೇಲೆ ಬರುತ್ತಾರೆಂದರೆ, ಅವರು ಹಳಬರನ್ನು ಹಿಂದಕ್ಕೆ ಹಾಕಿ, ಅವರ ಜೊತೆ ಜೊತೆಗೆ ನಿಂತು, ಅವರಿಗೆ ಬದಲು ಸ್ಥಾನ ಪಡೆಯಲು ಸಮರ್ಥರಾಗುವ ದಿನಗಳು ದೂರವಿರುವುದಿಲ್ಲ. ಹಾಗೆ ನೋಡಿದರೆ, ಹಳೆಯ ಕಾರ್ಯಕರ್ತರು ಅಥವಾ ಹೊಸ ಕಾರ್ಯಕರ್ತರಲ್ಲಿ ಯಾರನ್ನು ಅವಲಂಬಿಸಬೇಕು ಎನ್ನುವುದು ಇಲ್ಲಿನ ಪ್ರಶ್ನೆಯಲ್ಲ. ಇಬ್ಬರ ಮಿಶ್ರಣವನ್ನು ಮಾಡಿ, ಪಕ್ಷದ ಮತ್ತು ರಾಜ್ಯದ ನಾಯಕತ್ವದ ಒಂದೇ ಮೇಳವಾಗಿ ಹಳೆಯ ಮತ್ತು ಹೊಸ ಕಾರ್ಯಕರ್ತರನ್ನು ಒಟ್ಟಿಗೆ ಸೇರಿಸುವುದು ಉತ್ತಮ.

ಆದ್ದರಿಂದಲೇ ನಾವು ಯುವ ಕಾರ್ಯಕರ್ತರನ್ನು ಸರಿಯಾದ ಸಮಯಗಳಲ್ಲಿ ನಾಯಕತ್ವದ ಸ್ಥಾನಗಳಿಗೆ ಧೈರ್ಯವಾಗಿ ಏರಿಸಬೇಕು.

ಪರಿಶೀಲನೆಯಲ್ಲಿರುವ ಅವಧಿಯಲ್ಲಿ ಪಕ್ಷವು ಗಳಿಸಿದ ಮುಖ್ಯ ಸಾಧನೆಗಳಲ್ಲಿ ಒಂದೆಂದರೆ, ಪಕ್ಷದ ನಾಯಕತ್ವವನ್ನು ಬಲಗೊಳಿಸುವಾಗ, ಕಾರ್ಯಕರ್ತರ ಆಯ್ಕೆಯಲ್ಲಿ ಮೇಲಿನಿಂದ ಕೆಳಗಿನವರೆಗೂ ಈ ವಿಧಾನವನ್ನೇ ಸಫಲವಾಗಿ ಅನುಸರಿಸಿ ಹಳೆಯ ಮತ್ತು ಹೊಸ ಕಾರ್ಯಕರ್ತರ ಮಿಶ್ರಣವನ್ನು ಆರಿಸಲಾಗಿದೆ.

ಪರಿಶೀಲನೆಯಲ್ಲಿರುವ ಅವಧಿಯಲ್ಲಿ ಪಕ್ಷವು ಐದುಲಕ್ಷ ಯುವ ಬೋಲ್ಷೆವಿಕ್‌ರನ್ನು, ಪಕ್ಷದ ಸದಸ್ಯರನ್ನು ಮತ್ತು ಪಕ್ಷದ ಹಿತೈಷಿಗಳನ್ನು ರಾಜ್ಯದ ಮತ್ತು ಪಕ್ಷದ ಉನ್ನತ ಸ್ಥಾನಗಳಿಗೆ ಏರಿಸುವುದರಲ್ಲಿ ಸಫಲವಾಗಿದೆ, ಅದರಲ್ಲಿ ಶೇಕಡಾ ಇಪ್ಪತ್ತರಷ್ಟು ಜನರು ಮಹಿಳೆಯರಾಗಿದ್ದಾರೆ ಎಂದು ಕೇಂದ್ರ ಸಮಿತಿ ವಶದಲ್ಲಿರುವ ದಾಖಲೆಗಳು ತೋರಿಸುತ್ತವೆ.

ಈಗ ನಮ್ಮ ಕರ್ತವ್ಯವೇನು ?

ಮೇಲಿನಿಂದ ಕೆಳಗಿನ ಹಂತದವರೆಗೆ, ಕಾರ್ಯಕರ್ತರನ್ನು ಆಯ್ದು, ಅವರೆಲ್ಲ ಒಂದೇ ಅಂಗದ ಕೈಕೆಳಗೆ ಬರುವಂತೆ ಮಾಡಿ, ಅವರನ್ನು ಸರಿಯಾದ, ವೈಜ್ಞಾನಿಕ ಬೋಲ್ಷೆವಿಕ್ ಮಟ್ಟಕ್ಕೆ ಏರಿಸುವುದು ನಮ್ಮ ಸದ್ಯದ ಕರ್ತವ್ಯವಾಗಿದೆ.

●

ಬಲಕಮ್ಯುನಿಸ್ಟರ ಹಳೇ ರೋಗ ಡಾಂಗೆ ಶಿಷ್ಯರ ಮಾಮೂಲಿ ರಾಗ

—ಹುಸೇನ್

ಕರ್ನಾಟಕದಲ್ಲಿ ಬಲಕಮ್ಯುನಿಸ್ಟರ ಮುಖಪತ್ರಿಕೆ "ಕೆಂಬಾವುಟ"ದ ತಾ॥ 18-3-79 ರ ಸಂಚಿಕೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್. ನಂಬೂದಿರಿಪಾದ್‌ರವರನ್ನು ಟೀಕಿಸಿ ಒಂದು ಲೇಖನ ಬಂದಿದೆ. ಲೇಖನದ ಮುಖ್ಯ ವಿಷಯಕ್ಕೆ ಬರುವ ಮುನ್ನ ಲೇಖಕರು ಕಾಂ. ಇ. ಎಂ. ಎಸ್. ರವರಿಗೆ ಅನಾರೋಗ್ಯವಿರುವುದರಿಂದ ಏನೇನೋ ಬಡಬಡಿಸುತ್ತಿದ್ದಾರೆ ಎಂದು ಬರೆದಿದ್ದಾರೆ. ಆದರೆ ಖಾಯಂ ಕಾಯಿಲೆ ಕಾಂ. ಶ್ರೀಪಾದ ಅಮೃತ ಡಾಂಗೆಯವರು ಅವರಿಗೆ ರಷ್ಯಾದವರು ಕೃಪಾಶೀರ್ವಾದವಾಗಿ ಕೊಟ್ಟ ಆರ್ಡರ್ ಆಫ್ ಲೆನಿನ್ ಪ್ರಶಸ್ತಿಯನ್ನು ಲೇವಡಿ ಮಾಡುವಂತೆ, ಸರ್ವಾಧಿಕಾರಿಣಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಶುಭಾಶಯ ಕಳಿಸಿ, ಕಾಂ. ಇ. ಎಂ. ಎಸ್. ರವರಿಗೆ ಸಂತಾಪ ಸೂಚಕ ಸಂದೇಶ ಕಳಿಸಿದ್ದನ್ನು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ. ಜೊತೆಗೆ ಕೆಂಬಾವುಟದ ಪೀತ ಪುರೋಹಿತರ ಕುರುಡು ಮಾರ್ಕ್ಸಿಸ್ಟ್ ವಿರೋಧದ ರೋಗ ತಮಗೆ ಅಂಟಿರುವುದನ್ನೂ ಮರೆತುಬಿಟ್ಟಿದ್ದಾರೆ. ಆದ್ದರಿಂದಲೇ ಹಾಡಿದ್ದನ್ನೇ ಹಾಡೋ ಕಿಸಬಾಯಿದಾಸರಂತೆ ಹಳೆಯದನ್ನೇ ಹಾಡಿದ್ದಾರೆ.

ಎಡಪಕ್ಷದ ಮುದ್ರೆಬೇಕು

ತಾವೊಂದು ಎಡ ಪಕ್ಷವೆಂಬ ಮುದ್ರೆ, ಬೇಕೆಂದು ಬೇಡುವ ಬಲಕಮ್ಯುನಿಸ್ಟರ ಬೇಡಿಕೆಯನ್ನು ಪರಿಶೀಲಿಸುವ ಮುನ್ನ ಸ್ವಲ್ಪ ಕರ್ನಾಟಕದ ಬಲಕಮ್ಯುನಿಸ್ಟರತ್ತ ನೋಡೋಣ. ಶ್ರೀಪಾದ ಅಮೃತ ಡಾಂಗೆಯವರ ಶಿಷ್ಯಮಂಡಲಿಯ ನೇತೃತ್ವದಲ್ಲಿರುವ ಬಲಕಮ್ಯುನಿಸ್ಟರ ಕರ್ನಾಟಕ ರಾಜ್ಯ ಮಂಡಲಿ ತಮ್ಮ ಪಕ್ಷದ ರಾಷ್ಟ್ರೀಯ ಸಮಿತಿಯ ತೀರ್ಮಾನವನ್ನು ಮೂಲೆಗೆ ಹಾಕಿ ಮಾಡಿದ ಘನ ಕೆಲಸವೆಂದರೆ, ಅಸೆಂಬ್ಲಿ ಚುನಾವಣೆಗಳಲ್ಲಿ ಇಂದಿರಾ ಕಾಂಗ್ರೆಸ್‌ನೊಂದಿಗೆ ಚುನಾವಣಾ ಮೈತ್ರಿಯನ್ನು ಮಾಡಿಕೊಂಡಿದ್ದು. ಏಕೆಂದರೆ ಕರ್ನಾಟಕದಲ್ಲಿ ಕೆ. ಹೆಚ್. ಪಾಟೀಲರ ಕಾಂಗ್ರೆಸ್ಸಿನೊಂದಿಗೆ ಮೈತ್ರಿ ಮಾಡಿಕೊಂಡಲ್ಲಿ ತಮಗೆ ಒಂದು ಸೀಟೂ ಸಿಕ್ಕುವುದಿಲ್ಲವೆಂದು ಅವರಿಗೆ ಮೊದಲೇ ಖಾತ್ರಿಯಾಗಿತ್ತು. ಇಂದಿರಾ ಗಾಂಧಿಯವರಿಗೆ ಬೆಂಬಲ ಕೊಟ್ಟಿದ್ದು ತಪ್ಪೆಂದು ತೋಬಾ, ತೋಬಾ ಮಾಡಿಕೊಂಡ ಬಲಕಮ್ಯುನಿಸ್ಟರು, ಕೆಲವು ಎಂ. ಎಲ್. ಎ. ಸೀಟುಗಳಿಗಾಗಿ ತತ್ವ, ಧೋರಣೆಗಳನ್ನು ಗಾಳಿಗೆ ತೂರಿ ಹಿಂಬಾಗಿಲಿನಿಂದ ಇಂದಿರಾ ಸೆರಗಿನಲ್ಲಿ ಸೇರಿಕೊಂಡಿದ್ದು, ಅದು ಎಂತಹ ಪಕ್ಷವೆಂದು ಇಡೀ ಜನತೆಗೆ ತೋರಿಸಿಕೊಟ್ಟಿದ್ದಾಯಿತು. ಬಲಕಮ್ಯುನಿಸ್ಟರಿಗೆ ಯಾವಾಗಲೂ ತತ್ವ, ಧೋರಣೆಗಳಿಗಿಂತ ಪ್ರಿಯವಾದದ್ದು ಅಧಿಕಾರ, ಅದೂ ಆ ಅಧಿಕಾರ ಇಂದಿರಾಗಾಂಧಿಯವರ ನೇತೃತ್ವದಿಂದಲೇ ಬರಬೇಕು. ಇಂತಹ ಒಂದು ಪಕ್ಷ ಎಡಪಕ್ಷವೆಂದು ಹೇಗೆ ಹೇಳಿಕೊಳ್ಳುತ್ತದೆ ?

ಅಧಿವೇಶನದ ತೀರ್ಮಾನ

ಬಲಕಮ್ಯುನಿಸ್ಟರ ರಾಷ್ಟ್ರೀಯ ಅಧಿವೇಶನ ನಡೆದಾಗ, ಪಾರ್ಲಿಮೆಂಟ್ ಮತ್ತು ಅಸೆಂಬ್ಲಿ ಚುನಾವಣೆಗಳಲ್ಲಿ ಸಾಕಷ್ಟು ಪೆಟ್ಟು ತಿಂದ ಬ.ಕ.ರು (ಬಲಕಮ್ಯುನಿಸ್ಟರು) ಸಮ್ಮೇಳನದಲ್ಲಿ ತಾವು ತುರ್ತುಪರಿಸ್ಥಿತಿ ಮತ್ತು ಇಂದಿರಾಗಾಂಧಿಯವರಿಗೆ ಬೆಂಬಲಿಸಿದ್ದು ತಪ್ಪಾಯಿತೆಂದು ಸಾಕಷ್ಟು ಕಣ್ಣೀರು ಸುರಿಸಿದರು, ಅಲ್ಲದೆ ಎಡ ಪಕ್ಷಗಳ ಐಕ್ಯತೆಯ ಬಗ್ಗೆಯೂ ಬಾಯಿ ತುಂಬಾ ಮಾತನಾಡಿದರು. ಆದ್ದರಿಂದಲೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ದಾರಿ ತಪ್ಪಿದ ತಮ್ಮನೊಬ್ಬ ಸರಿಹೋಗಬಹುದೆಂಬ ವಿಶ್ವಾಸದಿಂದ, ಬಲಕಮ್ಯುನಿಸ್ಟರನ್ನು ಎಡ ಪಕ್ಷಗಳ ಗುಂಪಿಗೆ ಆಹ್ವಾನಿಸಿದ್ದು. ಆದರೆ ನಾಯಿ ಬಾಲ ಡೊಂಕೆಂಬಂತೆ, ಬಲಕಮ್ಯುನಿಸ್ಟರು ಮತ್ತೆ ತಮ್ಮ ಹಳೆಯ ಸ್ನೇಹಿತರಾದ ಕಾಂಗ್ರೆಸ್ಸಿನವರನ್ನೇ ಹುಡುಕಿಕೊಂಡು ಹೋದರು. ಕೇರಳದಲ್ಲಿ ಅವರ ಮಧುಚಂದ್ರರೆಡ್ಡಿ ಕಾಂಗ್ರೆಸ್‌ನವರೊಂದಿಗೆ, ಕರ್ನಾಟಕದಲ್ಲಿ ಇಂದಿರಾ ಕಾಂಗ್ರೆಸ್‌ನವರೊಂದಿಗೆ, ಅಧಿಕಾರದ ಅಮಲಿನ ಆಸೆ ಕಾಂಗ್ರೆಸ್ಸಿನವರಿಗೆ ಇರುವಂತೆ ಅವರ ಪಕ್ಕಾ ಸ್ನೇಹಿತರಾದ ಬ.ಕ. ರಿಗೆ ಇಲ್ಲದಿದ್ದರೆ ಶೋಭೆಯಿಲ್ಲ ಅಲ್ಲವೇ ? ಇದೆಲ್ಲದರ ಜೊತೆಗೆ ಅವರಿಗೆ ಪ. ಬಂಗಾಳ, ತ್ರಿಪುರಾದಲ್ಲಿ ಈಗ ಎಡ ಪಕ್ಷಗಳ ಸ್ನೇಹಬೇಕು. ಏಕೆ ಎಂಬುದಕ್ಕೆ ಉತ್ತರ ಈಗಾಗಲೇ ಹೇಳಿದೆ.

ಸಂಯುಕ್ತ ರಂಗಗಳು

ಕೇರಳ ಮತ್ತು ಪ. ಬಂಗಾಳಗಳ ಸಂಯುಕ್ತರಂಗಗಳು ಉರುಳಲು ತಾವು ಜವಾಬ್ದಾರರಲ್ಲ ಅದಕ್ಕೆ ಮಾರ್ಕ್ಸಿಸ್ಟರೇ ಹೊಣೆಯೆಂದು ಲೇಖಕರು ಅಪ್ಪಣೆ ಕೊಡಿಸಿದ್ದಾರೆ, ಅಲ್ಲದೆ ಇ.ಎಂ.ಎಸ್. ರವರು ಇತಿಹಾಸವನ್ನು ವಿಪರ್ಯಾಸಗೊಳಿಸಿದ್ದಾರೆಂದು ಆರೋಪಿಸಿದ್ದಾರೆ. ಚರಿತ್ರೆಯೆಂಬುದು ಬ.ಕ.ರು ಹೇಳುವ ಕಗ್ಗವಲ್ಲ. ಅದರಲ್ಲಿ ಜನತೆ ಮತ್ತು ಘಟನೆಗಳಿಗೆ ಸ್ಥಾನವಿದೆ. ಐಕ್ಯ ಕಮ್ಯುನಿಸ್ಟ್ ಪಕ್ಷ 1964ರಲ್ಲಿ ಒಡೆದು ಎರಡಾಗುವುದಕ್ಕೆ ಶ್ರೀಪಾದ ಅಮೃತ ಡಾಂಗೆಯವರ ಕಾಂಗ್ರೆಸ್

(6ನೇ ಪುಟ ನೋಡಿ)

ಬಲಕಮ್ಯುನಿಸ್ಟರ ಹಳೇ ರೋಗ ಡಾಂಗೆ ಶಿಷ್ಯರ ಮಾಮೂಲಿ ರಾಗ

(೩ನೇ ಪುಟದಿಂದ)

ಪ್ರೇಮವೇ ಕಾರಣವೆಂಬುದು, ಕಮ್ಯುನಿಸ್ಟ್ ಪಕ್ಷದ ಇತಿಹಾಸ ಬಲ್ಲ ಎಲ್ಲರಿಗೂ ಗೊತ್ತಿರುವ ವಿಷಯ. ಆದ್ದರಿಂದಲೇ ತುರ್ತುಪರಿಸ್ಥಿತಿಯ ಕುಖ್ಯಾತ ಮುಖ್ಯಮಂತ್ರಿಗಳಲ್ಲಿ ಒಬ್ಬರಾದ ಅಚ್ಯುತ ಮೆನನ್‌ರವರಿಗೆ, ಮುಖ್ಯಮಂತ್ರಿಸ್ಥಾನ ಸಿಗುವುದೆಂಬ ಆಸೆಯಿಂದ ಅಧಿಕಾರ ಪ್ರಿಯರಾದ ಬ.ಕ.ರು ಕಾಂಗ್ರೆಸ್‌ನವರೊಂದಿಗೆ ಸೇರಿಕೊಂಡು ಸಂಯುಕ್ತ ರಂಗವನ್ನು ಉರುಳಿಸಿದರು. ಭ್ರಷ್ಟಾಚಾರದಂಥ ತೀವ್ರವಾದ ಆಪಾದನೆಗಳು ತಮ್ಮ ಸಂಪುಟದ ಸಹೋದ್ಯೋಗಿಗಳ ಮೇಲೆ ಬಂದಾಗಲೂ ರಾಜೀನಾಮೆ ಕೊಡದೆ ಇರಲು ಕಾಂ.ಇ.ಎಂ.ಎಸ್. ರವರು ಬ. ಕ. ರ ಸ್ನೇಹಿತರಾದ ಶ್ರೀಮಾನ್ ದೇವರಾಜ ಅರಸರಲ್ಲ. ಸಂಯುಕ್ತ ರಂಗದ ಭಾಗವಾಗಿದ್ದ ಬ.ಕ.ರು ಪರಿಸ್ಥಿತಿಯನ್ನು ಎದುರಿಸಿ, ಎಡ ಪಕ್ಷಗಳೊಂದಿಗೆ ಉಳಿಯುವ ಬದಲು ಅಧಿಕಾರದ ಆಸೆಯಿಂದ ಕಾಂಗ್ರೆಸ್ಸಿಧ ಹಿಂದೆ ಹೋದರು. ಕಂಡದ್ದನ್ನು ಕಂಡಂತೆ ಹೇಳಿದರೆ ಕೆಂಡದಂತಹ ಕೋಪವಂತೆ, ವಾಸ್ತವಿಕತೆಯನ್ನು ಹೇಳಿದ ಇ.ಎಂ.ಎಸ್. ರವರ ಬಗ್ಗೆ ಬ.ಕ. ರಿಗೆ ಕೋಪ.

ಪ. ಬಂಗಾಳದಲ್ಲಿಯಾದರೂ ಬ.ಕ.ಕ ಪಾತ್ರ ಭಿನ್ನವಾದದ್ದಲ್ಲ. ಕೇರಳದಂತೆ ಪ. ಬಂಗಾಳದಲ್ಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅತ್ಯಂತ ಜನಪ್ರಿಯ ಪಕ್ಷ. ಇದನ್ನು ಸಹಿಸದ ಬ. ಕ. ರು ಕಾಂಗ್ರೆಸ್‌ನವರೊಂದಿಗೆ ಸೇರಿಕೊಂಡು ಮಾರ್ಕ್ಸ್‌ವಾದಿಗಳನ್ನು ಮುಗಿಸಿಬಿಟ್ಟರೆ ತಾವೇ ಇಡೀ ದೇಶದ ಕಮ್ಯುನಿಸ್ಟ್ ಚಳುವಳಿಯ ಗುತ್ತೇದಾರರಾಗಬಹುದೆಂದು ಯೋಚಿಸಿ ಕಾಂಗ್ರೆಸ್‌ನೊಂದಿಗೆ ಸರಕಾರ ಉರುಳಿಸಲು ಸಂಚು ಮಾಡಿದರು. ಆದ್ದರಿಂದಲೇ 1972 ರ ಚುನಾವಣೆಯಲ್ಲಿ ಬ.ಕ.ರು ಕಾಂಗ್ರೆಸ್‌ನೊಂದಿಗೆ ಚುನಾವಣಾ ಮೈತ್ರಿ ಮಾಡಿಕೊಂಡಿದ್ದರಲ್ಲದೆ, 1972ರಿಂದ 1977 ರ ವರೆಗೆ ಕಾಂಗ್ರೆಸ್ಸಿನ ಅರೆ ಫ್ಯಾಸಿಸ್ಟ್ ದಬ್ಬಾಳಿಕೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸಹಸ್ರಾರು ಕಾರ್ಯಕರ್ತರು ಮತ್ತು ನಾಯಕರ ಕೊಲೆಗಳಿಗೆ ಪರೋಕ್ಷವಾಗಿ ಬೆಂಬಲ ನೀಡಿದರು. ಸಿದ್ಧಾರ್ಥಶಂಕರರಾಯ್ ಸರಕಾರದ ಪತನವಾಗುವವರೆಗೆ ಬ.ಕ.ರು ರಕ್ತಪಿಪಾಸು ಸಿದ್ಧಾರ್ಥಶಂಕರ ರಾಯ್ ಸರಕಾರಕ್ಕೆ ಬೆಂಬಲ ನೀಡಿದ್ದರು. ಈ ಬಗ್ಗೆ ಬ.ಕ.ರು ಏನು ಸುಳ್ಳು ಹೇಳಿದರೂ, ಪ. ಬಂಗಾಳದ ಜನತೆ ಅವರಿಗೆ 1978 ರ ಚುನಾವಣೆಯಲ್ಲಿ ಸರಿಯಾದ ಉತ್ತರ ಕೊಟ್ಟಿದೆ.

ಸುಳ್ಳಿನ ರೋಗ

ಬ.ಕ. ರಿಗೆ ತಾವು ಹೇಳುವುದು ಮಾತ್ರ ಸತ್ಯ, ಉಳಿದುದೆಲ್ಲ ಮಿಥ್ಯವೆಂದು ಬರೆಯುವ ಹಳೆಯ ರೋಗವುಂಟು. ಆದ್ದರಿಂದಲೇ ಅವರು ಕಾಲ, ಕಾಲಕ್ಕೆ ಯಾರ ಬಗ್ಗೆ ಏನು ಬರೆಯುತ್ತಾರೋ ಅದೇ ಸತ್ಯ. 1969 ರಿಂದಲೂ ಇಂದಿರಾಗಾಂಧಿ ಅವರಿಗೆ ಪ್ರಗತಿಗಾಮಿ, 1977 ರಿಂದ ಪ್ರತಿಗಾಮಿ. ಇತರರು ಇಂದಿರಾಗಾಂಧಿಯವರು ಪ್ರತಿಗಾಮಿ ಶಕ್ತಿಗಳ ಸಂಕೇತವೆಂದರೆ ಬ.ಕ.ರು ಒಪ್ಪುವುದಿಲ್ಲ. ಮೊದಲಿನಿಂದಲೂ ಇಂದಿರಾಗಾಂಧಿಯವರು ಪ್ರಗತಿಪರರು, ತುರ್ತುಪರಿಸ್ಥಿತಿ ಸಮಯದಲ್ಲಿ ಸ್ವಲ್ಪಮಟ್ಟಿನ ಅತಿರೇಕಗಳಾಗಿವೆ ಎಂದು ಗಳಹುತ್ತಾರೆ. ಬ.ಕ.ರು ಹೇಳುವುದೇ ಸತ್ಯ, ಬರೆಯುವುದೇ ಇತಿಹಾಸ! ಸುಳ್ಳನ್ನು ಸೃಷ್ಟಿ ಮಾಡುವುದರಲ್ಲಿಯೂ ಅವರು ಹಿಂದೆ ಬಿದ್ದಿಲ್ಲ. ಸಂಯುಕ್ತ ರಂಗಗಳನ್ನು ಒಡೆದ ಬ.ಕ.ರು ಅದನ್ನು ಒಡೆದದ್ದು ಸಂಯುಕ್ತರಂಗದ ಮುಖ್ಯಮಂತ್ರಿಯಾಗಿದ್ದ ಕಾಂ. ಇ. ಎಂ. ಎಸ್. ಎನ್ನುತ್ತಾರೆ. 1964 ರಲ್ಲಿ ಐಕ್ಯ ಕಮ್ಯುನಿಸ್ಟ್ ಪಕ್ಷವನ್ನು ಒಡೆದವರು ಶ್ರೀಪಾದಅಮೃತಡಾಂಗೆಯವರು. ಅದನ್ನು ಬ.ಕ. ರು ಸುಲೀಸಾಗಿ ಚೀನಾದವರ ಮೇಲೆ ಹಾಕುತ್ತಾರೆ. 1969 ರಿಂದ 1977 ರವರೆಗೆ ಇಂದಿರಾಗಾಂಧಿಯವರ ಬಗಲ ಬಚ್ಚಾಗಳಾಗಿದ್ದನ್ನು ಆಗಲೇ ಇಲ್ಲ ಕೇವಲ ಸಹಕಾರ ಎಂದು ಹೇಳುತ್ತಾರೆ. ಈಗಲೂ ಕರ್ನಾಟಕದಲ್ಲಿ ಇಂದಿರಾ ಕಾಂಗ್ರೆಸ್‌ನೊಂದಿಗೆ ಚಕ್ಕಂದವಾಡುತ್ತೀರಲ್ಲಾ ಎಂದು ಕೇಳಿದರೆ ಇಲ್ಲ, ಅವರೇ ನಮ್ಮ ಹಿಂದೆ ಇದ್ದಾರೆ ಎನ್ನುತ್ತಾರೆ. ಸುಳ್ಳು ಯಾವುದು? ನಿಜ ಯಾವುದು ಎಂಬುದನ್ನು ಜನತೆಯೇ ತೀರ್ಮಾನಿಸಬೇಕು.

ಸ್ವಯಂಟೀಕೆಯ ನಾಟಕ

ಸ್ವಯಂ ಟೀಕೆ ಮಾಡಿಕೊಂಡು ನಮ್ಮ ಪಾಪಗಳನ್ನು ತೊಳೆದುಕೊಂಡು ಪರಿಶುದ್ಧವಾಗಿದ್ದೇವೆಂದು ಹೇಳುವ ಬ.ಕ.ರು, ಕಚ್ಚಾ ವಿಮರ್ಶೆ ಮಾತ್ರ ಮಾಡಿಕೊಂಡಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಜನತಾ ಪಕ್ಷಕ್ಕೆ ಬೆಂಬಲ ನೀಡಿರುವುದು ಕೇವಲ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಮಾತ್ರ. ಬ.ಕ.ರ ಕುಮಾರಮಂಗಳಂ ಸೂತ್ರದಂತೆ ಅಲ್ಲ. ಅಥವಾ ಇಂದಿರಾ ಗಾಂಧಿ, ಸಂಜಯಗಾಂಧಿಗಳು ಬ.ಕ.ರು ಕೇವಲ ತಮ್ಮ ಚಮಚಾಗಿರಿ ಮಾಡಿಕೊಂಡು ಇರಬಹುದೆಂದು ಹೇಳಿದರೂ ಪ್ರತಿಭಟಿಸದೆ ಮೌನವಾಗಿ ಮತ್ತೆ ಸೆರಗಿನಲ್ಲೇ ಸೇರಿಕೊಂಡಂತೆಯೂ ಅಲ್ಲ. ಬ.ಕ.ರು ನಿಜವಾಗಿಯೂ ಎಡ ಪಕ್ಷಗಳ ಐಕ್ಯತೆಯ ಬಗ್ಗೆ ಪ್ರಾಮಾಣಿಕವಾಗಿದ್ದರೆ, 'ಸ್ವಯಂ' ಟೀಕೆಯನ್ನು ಸಂಪೂರ್ಣಗೊಳಿಸುವ ಕಾಳಜಿಯಿದ್ದರೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಬಗ್ಗೆ, ಮುಂದಿನ ಕಾರ್ಯಾಚರಣೆಗಳ ಬಗ್ಗೆ ಗಂಭೀರವಾದ ಚರ್ಚೆ ನಡೆಸಲಿ. ಅದನ್ನು ಬಿಟ್ಟು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರ ಬಗ್ಗೆ ಹಗುರವಾಗಿ ಬರೆಯುವುದು ಅಥವಾ ಇರುವ ಭಿನ್ನಾಭಿಪ್ರಾಯಗಳನ್ನು ಬೆಳೆಸುವ ಕಗ್ಗಗಳನ್ನು ಹೊಸೆಯುವುದು ಯಾವ ರೀತಿಯಿಂದಲೂ ಗ್ರಹಪೀಡಿತ ಬ.ಕ.ರಿಗಾಗಲೀ, ಮುಂದಿನ ಎಡ ಚಳುವಳಿಗಳಿಗಾಗಲೀ ಪ್ರಯೋಜನವಿಲ್ಲ.

ಐಕ್ಯ ಹೋರಾಟವೇ ಪರಿಹಾರ

ದೇಶದಲ್ಲಿ ಬಂಡವಾಳಶಾಹಿ ಶಕ್ತಿಗಳು ಹಾಗೂ ಅರೆ-ಫ್ಯಾಸಿಸ್ಟ್ ಶಕ್ತಿಗಳು ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುತ್ತಿರುವಾಗ, ಇಡೀ ದೇಶದಲ್ಲಿ ಹಬ್ಬುತ್ತಿರುವ ಪ್ರತಿಗಾಮಿ ಭಾವನೆಗಳು, ಕಾರ್ಮಿಕವರ್ಗದ ಮೇಲಿನ ದಬ್ಬಾಳಿಕೆ, ಭೂರಹಿತ ರೈತರ ಶೋಷಣೆ, ಹರಿಜನ-ಗಿರಿಜನರ ಕೊಲೆ, ಸುಲಿಗೆ ಇತ್ಯಾದಿ ಬಂಡವಾಳಶಾಹಿ ಸಮಾಜದ ರೋಗಗಳನ್ನು ತಡೆಗಟ್ಟಬೇಕಾದರೆ ರಾಷ್ಟ್ರಮಟ್ಟದಲ್ಲಿ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಅಗತ್ಯವಾಗಿದೆ. ಜನ ಸಾಮಾನ್ಯರಿಗಾಗಿ, ಸಾಮೂಹಿಕ ಸಂಘಟನೆಗಳ ಮಟ್ಟದಲ್ಲಿ ನಡೆಯುವ ಈ ಐಕ್ಯ ಹೋರಾಟಗಳು ಮಾತ್ರ ಮುಂದಿನ ಕಮ್ಯುನಿಸ್ಟ್ ಚಳುವಳಿ ದೇಶದಲ್ಲಿ ಯಾವ ರೀತಿ ಬೆಳೆಸಬಹುದೆಂದು ಮಾರ್ಗದರ್ಶನ ಮಾಡಬಹುದು. ●

ಬನಶಂಕರಿಯ ಬಡಜನತೆಯ ಅಸಹಾಯಕತೆ

(3ನೇ ಪುಟದಿಂದ)

ಈ ತಿಂಗಳ 17ರ ಶನಿವಾರ ಕ್ಕೆ ಒಂದು ತಿಂಗಳ ಮುಂಚೆ ಪೋಲೀಸರು ಗುಡಿಸಲುಗಳನ್ನು ಉರುಳಿಸಲು ಬಂದು, ನಾಲ್ಕೈದು ಗುಡಿಸಲುಗಳನ್ನು ಉರುಳಿಸುವುದರಲ್ಲಿ, ಅಲ್ಲಿನ ಗುಡಿಸಲು ನಿವಾಸಿಗಳಿಂದ ಸಂಘಟಿತ ಪ್ರತಿಭಟನೆಯನ್ನು ಕಂಡು ಕಾಲ್ತೆಗೆದಿದ್ದರು.

ಸರ್ಕಾರದ ಹತ್ತು ಎಕರೆ ಭೂಮಿಯನ್ನು ಸರ್ಕಾರವೇ ಈ ಬಡಪಾಯಿಗಳಿಗೆ ನೀಡಿ, ಗುಡಿಸಲುಗಳನ್ನು ಕಟ್ಟಿಕೊಂಡ ನಂತರ ಮನೆಗಂದಾಯವನ್ನೂ ವಸೂಲಿ ಮಾಡಿ, ಪ್ರಸ್ತುತ ಐದು ನೂರು ಗುಡಿಸಲುಗಳನ್ನು ಕೆಡವಿ ಸಾವಿರಾರು ಬಡವರನ್ನು ಬೀದಿಪಾಲು ಮಾಡಿರುವ ದೇವರಾಜ ಅರಸು ಸರ್ಕಾರದ ಆಡಳಿತವನ್ನು "ಸಮಾಜವಾದ ಬಾಯಲ್ಲಿ, ಗೂಂಡಾಗಿರಿ ಕೈಯ್ಯಲ್ಲಿ" ಎಂದು ವರ್ಣಿಸದೆ ಬೇರೇನು ವರ್ಣಿಸಲು ಸಾಧ್ಯ?

ಕೇಂದ್ರ ಸರ್ಕಾರದ ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯಾ ಸಂಸ್ಥೆಗೆ, ಕೇಂದ್ರವು ರಾಜ್ಯ ಸರ್ಕಾರವನ್ನು 23 ಎಕರೆ ಭೂಮಿಗಾಗಿ ಕೇಳಿ, ಕನಿಷ್ಠ 13 ಎಕರೆಯನ್ನಾದರೂ ಕೊಡಬೇಕೆಂದು ಕೇಳಿತ್ತು. ಪ್ರಸ್ತುತ ಬನಶಂಕರಿಯಲ್ಲಿರುವುದು 10 ಎಕರೆ, ಈ ಭೂಮಿ ಜಿ. ಎಸ್. ಐ. ನವರಿಗೆ ಕೊಟ್ಟಿದ್ದೆಂದು ನಂತರ ಸರ್ಕಾರಕ್ಕೆ ಅರಿವಾಗಿದೆ. ವರದಿಯ ಪ್ರಕಾರ ರಾಜ್ಯಸರ್ಕಾರ ಕೇಂದ್ರಕ್ಕೆ ಬನಶಂಕರಿಯಲ್ಲಿರುವ ಭೂಮಿಯನ್ನು ಕೊಡುತ್ತೇನೆಂದು ಬಾಂಡ್ ಬರೆದೇನೂ ಕೊಟ್ಟಿಲ್ಲ.

ಎಂ. ಎಲ್. ಸಿ. ಗಳು ಬಡಪಾಯಿಗಳಿಂದ ಹಣವಸೂಲಿ ಮಾಡಿದ್ದೂ, ವಸೂಲಿ ಮಾಡಲು ಎರಡು ಮೂರು ಬಾರಿ ಸಭೆಗಳನ್ನು ಕರೆದು, ಇಷ್ಟು ಸಾವಿರ ವಸೂಲಿಯಾಗಿದೆ, ಅಷ್ಟು ಸಾವಿರ ವಸೂಲಿಯಾಗಬೇಕಿದೆ, ಎಂದು ವಸೂಲಿ ಮಾಡಿದ್ದನ್ನೂ, ಮತ್ತೆಲ್ಲವನ್ನೂ "ನಮಗೇನೂ ಗೊತ್ತಿಲ್ಲ" ಎಂದು ನಿರಾಕರಿಸುವುದು ಮಾತ್ರವೇ ಅಲ್ಲದೆ, ಅವರ ಕೈಯಲ್ಲಿ ಏಕೆ ಕೊಟ್ಟಿರಿ (ಎಂ. ಎಲ್. ಸಿ. ಗಳು ಹಣ ವಸೂಲಿಗಾಗಿ ನೇಮಿಸಿದ್ದ ಏಜೆಂಟರುಗಳು) ನನ್ನ ಕೈಯಲ್ಲೇಕೊಟ್ಟಿದ್ದರೆ ನಾನು ನಿಮ್ಮನ್ನು ರಕ್ಷಿಸುತ್ತಿದ್ದೆ ಎಂದು ಗುಡಿಸಲು ನಿವಾಸಿಗಳನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿಬಿಟ್ಟಿದ್ದಾರೆ ಇಂದಿರಾ ಕಾಂಗ್ರೆಸ್‌ನ ಹರಿಜನ, ಅಲ್ಪಸಂಖ್ಯಾತರ ರಕ್ಷಕ ಎಂ.ಎಲ್.ಸಿ. ಗಳು ಮೇಲಿನ ಸರ್ವೆ ನಂಬರಿನ ಸ್ಪೆಷಲ್ ಡೆಪ್ಯುಟಿ ಕಮಿಷನರ್‌ರವರ ಪ್ರಿಲಿಮಿನರಿ ನೋಟಿಫಿಕೇಷನ್ ನಂ. L. A. Q. (2) S. R. ( ) 78-79 ತಾ॥ 23 ಅಕ್ಟೋಬರ್-78ರ ಪ್ರಕಾರ ಜಿ.ಎಸ್. ಐ. ನವರಿಗೆ ನಿವೇಶನ ಕೊಡುವ ಆಶ್ವಾಸನೆಯ ಮೇರೆಗೆ ಜಿ. ಎಸ್. ಐ. ನವರು ರಾಜ್ಯಸರ್ಕಾರಕ್ಕೆ ಮೂರು ಲಕ್ಷ ರೂ. ಮುಂಗಡನೀಡಿದ್ದಾರೆ.

ಈ ನೋಟಿಫಿಕೇಷನ್ ಯಾವ ನಿವೇಶನಕ್ಕಾಗಿದೆಯೋ ಖಚಿತವಾಗಿ ತಿಳಿದಿಲ್ಲ, ಹಣವನ್ನು ಕಾದಿರಿಸಲಾಗಿದೆ, ಯಾವುದೇ ನೋಟಿಫಿಕೇಷನ್ ಆಗುವುದಕ್ಕೆ ಮುಂಚೆ ಜೋಪಡಿಗಳು ನಿರ್ಮಿಸಲ್ಪಟ್ಟಿದ್ದುವು. ಸ್ಥಳ ಖಾಲಿ ಮಾಡಿಸುವ (ಸೆಕ್ಷನ್ 404) ಕೋರ್ಟಿನ ತಿಂಗಳ ಮುಂಚಿನ ತಿಳುವಳಿಕೆಯ ನೋಟೀಸ್ ಸಹ ಕೊಡಲಾಗಿಲ್ಲ.

ಕೋರ್ಟಿನ ನೋಟೀಸ್ ಇದೆಯೇ ಎಂದು ಕೆಲವು ವಿದ್ಯಾವಂತ ಬಡಪಾಯಿಗಳು ಪ್ರಶ್ನಿಸಿದಾಗ "ನೋಟೀಸ್ ಬೇಕೇ ಬೇಕಾ" ಎಂದ ಗೂಂಡಾಗಳು "ದಯಮಾಡಿ ತೆಗೆದುಕೊಳ್ಳಿ" ಎಂದು ಕೇಳಿದವರ ಎದೆಯ ಮೇಲೊದ್ದರು.

ಎಂ. ಎಲ್. ಸಿ. ಗಳು ಇಷ್ಟೆಲ್ಲಾ ಅನ್ಯಾಯ ಮಾಡಿದ್ದರೂ ಸುಮ್ಮನೆ ಕುಳಿತಿಲ್ಲ. ಈ ಬಡಪಾಯಿಗಳ ವಿರುದ್ಧ ಮತ್ತೊಂದು ಗುಂಪು ಬಡಪಾಯಿಗಳನ್ನು ಎತ್ತಿಕಟ್ಟಿ ಲಾರಿಗಳಲ್ಲಿ ತುಂಬಿಸಿಕೊಂಡು ಬನಶಂಕರಿಯ ಸುತ್ತಲೂ ಸುತ್ತುತ್ತಿದ್ದಾರೆ. ಅವರ ಜೊತೆಯಲ್ಲಿ ಜಿ. ಎಸ್. ಐ. ನ ಜೀಪುಗಳೂ ಸರ್ವೆ ನಡೆಸುತ್ತಿವೆ.

ಇಷ್ಟೆಲ್ಲಾ ನಡೆಯುತ್ತಿರುವಾಗ ಈ ಬಡಪಾಯಿಗಳನ್ನು ಕೇಳುವವರು ಯಾರು? ಬುಲ್‌ಡೋಜರ್ ಬಂದು ಸಮ ಸಮ ಮಾಡಲೂ ಬಹುದು. ಅದರ ಚಕ್ರದಡಿ ಸಿಲುಕಿ ಅಸುನೀಗಬಹುದಾದ ಗರ್ಭಿಣಿ, ಬಾಣಂತಿಯರನ್ನೂ, ಎಳೆಯ ಕಂದಮ್ಮಗಳನ್ನು ಪ್ರಾಣಾಪಾಯದಿಂದ ರಕ್ಷಿಸಲು ಮುಂಜಾಗ್ರತೆಯನ್ನಾದರೂ ವಹಿಸಬೇಕಿದೆ. ●

ಧರ್ಮಾರ್ಥ ಹೊಲ ಕೊಡುವ ಕಾಯಿದೆ ಜ್ಯಾರಿಯಾಗಬೇಕು

ಉಡುಪಿ ತಾಲ್ಲೂಕು ರೈತ ಸಂಘದ ವಿಸ್ತೃತ ಸಮಿತಿಯ ಸಭೆಯು ತಾ॥ 19-3-79 ರಂದು ಹೆಜ್ಮಾಡಿಯಲ್ಲಿ ಜರಗಿತು.

ದುಡಿಯುವ ರೈತರಿಗೆ ಧರ್ಮಾರ್ಥ ಹೊಲ ಕೊಡುವಂತೆಯೂ, ರೈತರ ಎಲ್ಲಾ ಸಾಲಗಳನ್ನು ಡಿಕ್ರಿ, ಜಪ್ತಿಗಳನ್ನು ರದ್ದುಗೊಳಿಸಿ, ಭೂನ್ಯಾಯ ಮಂಡಳಿಗಳ ಅನ್ಯಾಯದ ತೀರ್ಪುಗಳಿಂದ ಭೂಮಿಕಳಕೊಂಡವರಿಗೆ ನ್ಯಾಯ ಒದಗಿಸಬೇಕು. ಕೃಷಿಕೂಲಿಗಾರರಿಗೆ ಕನಿಷ್ಠ ಕೂಲಿಯಾಗಿ ರೂ. 8-00ನ್ನು ನಿರ್ಣಯಿಸಬೇಕು. ಪಂಪ್‌ಸೆಟ್‌ಗಳನ್ನಿಡಲು ರೈತರಿಗೆ ಈಗಿರುವ ವಾಟರ್ ಸರ್ಟಿಫಿಕೇಟ್‌ಗಳನ್ನು ಕೂಡಲೇ ಕೊಟ್ಟು ವಿಳಂಬವನ್ನು ತಪ್ಪಿಸಬೇಕೆನ್ನುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಸಂಜೆ 5-30ಕ್ಕೆ ಬಹಿರಂಗ ಸಭೆಯು ಎಚ್. ನಾರಾಯಣರ ಅಧ್ಯಕ್ಷತೆಯಲ್ಲಿ ಸೇರಿತು. ಸಭೆಯಲ್ಲಿ ಕಾಮ್ರೇಡರುಗಳಾದ ಸುಂದರ ಸಾಲಿಯಾನ್, ಅಬ್ರಹಾಂ ಕರ್ಕಡ, ಜನಾರ್ಧನ ನಾಯಕ್, ಡೇವಿಡ್ ಎ. ಕರ್ಕಡರೇ ಮೊದಲಾದವರು ಮಾತನಾಡಿ, "ದುಡಿಯುವ ರೈತರು ಕೃಷಿ ಕೂಲಿಗಾರರು ಸಂಘಟಿತರಾಗಿ ಮುಂದೆ ಬರುವ ಹೋರಾಟಕ್ಕೆ ಅಣಿ ನೆರೆಯಬೇಕೆಂದು ವಿನಂತಿಸಿದರು.

ಮೇ ತಿಂಗಳ 12 ರಿಂದ 14 ರ ವರೆಗೆ ಮಂಗಳೂರಿನಲ್ಲಿ ಸೇರಲಿರುವ ಕರ್ನಾಟಕರಾಜ್ಯ ರೈತರ ಸಮ್ಮೇಳನವನ್ನು ಯಶಸ್ವಿಗೊಳಿಸುವಂತೆ ರೈತರಿಗೆ ಕರೆನೀಡಲಾಯಿತು. ಟಿ. ಎಸ್. ಕೋಟಿಯಾನರು ಧನ್ಯವಾದ ಸಲ್ಲಿಸಿದರು. ●

ಬಡ್ಜೆಟ್ ವಿರೋಧಿಸಿ ಗುಲಬರ್ಗಾ ಎಸ್. ಎಫ್. ಐ. ಸಭೆ

ತಾ. 16-3-79 ರಂದು ಗುಲ್ಬರ್ಗ ಎಸ್. ಎಫ್. ಐ. ಘಟಕದ ಸರ್ವಸದಸ್ಯರ ಸಭೆ ನಡೆಯಿತು. ಸಭೆಯಲ್ಲಿ ಕೇಂದ್ರ ಸರಕಾರದ ಬಡ್ಜೆಟ್, ವಿದ್ಯಾರ್ಥಿಗಳಿಗೆ ಅಗತ್ಯವಾದ ಸೀಮೆಎಣ್ಣೆ ಮುಂತಾದ ವಸ್ತುಗಳ ಮೇಲೆ ಅಧಿಕ ತೆರಿಗೆ ಹೇರಿರುವುದರಿಂದ ವಿದ್ಯಾರ್ಥಿ ಸಮುದಾಯಕ್ಕೆ ಆಗಿರುವ ತೊಂದರೆಯನ್ನು ವಿವರಿಸಲಾಯಿತು. ಇದಲ್ಲದೆ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ವಿದ್ಯಾರ್ಥಿಗಳಿಗೆ ನೀಡಿದ್ದ ರಿಯಾಯಿತಿ ದರವನ್ನು ಕಡಿತಗೊಳಿಸಿರುವುದನ್ನು ಖಂಡಿಸಲಾಯಿತು. ನಂತರ ಎಸ್. ಎಫ್. ಐ. ಕಾರ್ಯದರ್ಶಿ ಕಾಂ. ಕಮಲಾಕರ್‌ರವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿಪತ್ರವನ್ನು ಅರ್ಪಿಸಲಾಯಿತು. ಮನವಿಪತ್ರದ ಪ್ರತಿಗಳನ್ನು ಕೇಂದ್ರ ಮತ್ತು ರಾಜ್ಯದ ಸಂಬಂಧಪಟ್ಟ ಮಂತ್ರಿಗಳಿಗೂ ಕಳಿಸಲಾಗಿದೆ. ●

ಎ. ಕೆ. ಜಿ. ಸ್ಮಾರಕ ಉಚಿತ ವಾಚನಾಲಯ

ಎ.ಕೆ.ಜಿ. ಎರಡನೇ ವರ್ಧಂತಿ ಸಲುವಾಗಿ ತಾ॥ 22ನೇ ಮಾರ್ಚಿ 1979 ರಂದು ಬೆಂಗಳೂರಿನ ಕಾರ್ಮಿಕ ಕೇಂದ್ರವಾದ ಯಶವಂತಪುರದ ಸಿ.ಐ.ಟಿ.ಯು ಆಫೀಸಿನ ಹಿಂಬದಿಯಲ್ಲಿ ಬಹಿರಂಗಸಭೆ ಕರೆದಿತ್ತು. ಈ ಸಂದರ್ಭದಲ್ಲಿ ಎ.ಕೆ.ಜಿ. ಸ್ಮಾರಕ ಉಚಿತ ವಾಚನಾಲಯವನ್ನು ಆಫೀಸಿನ ಪಕ್ಕದಲ್ಲಿ ತೆರೆಯಲಾಯಿತು. ವಾಚನಾಲಯವನ್ನು ಕರ್ನಾಟಕ ರಾಜ್ಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ರವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಎನ್. ಎಲ್. ಉಪಾಧ್ಯಾಯ ವಹಿಸಿದ್ದರು.

ಕಾಂ. ಎಂ. ಕೆ. ಭಟ್‌ರವರು ಮಾತನಾಡುತ್ತಾ "ಈ ವ್ಯವಸ್ಥೆಯ ವಿರುದ್ಧ ಅವಿಶ್ರಾಂತವಾಗಿ ಹೋರಾಟಮಾಡಿ ಜನತೆಯ ಅಪಾರ ಮೆಚ್ಚುಗೆಯನ್ನು ಪಡೆದ ಎ.ಕೆ.ಜಿ.ಯ ಬಗ್ಗೆ ನಮಗೆ ಗೌರವ ಮತ್ತು ಆಸಕ್ತಿ ಇದೆ ಅಂತಾದರೆ ನಾವು ಅವರು ಹಾಕಿಕೊಟ್ಟ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ದಾರಿಯಲ್ಲಿ ನಡೆದಿದ್ದೆ ಆದರೆ ಆಗ ನಾವು ನಿಜವಾಗಿ ಎ.ಕೆ.ಜಿ.ಯನ್ನು ನೆನೆದಂತಾಗುತ್ತದೆ" ಎಂದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ವಿ. ಜೆ. ಕೆ. ನಾಯರ್ ಮಾತನಾಡುತ್ತಾ 1904ರ ಅಕ್ಟೋಬರ್ ಒಂದರಂದು ಜನಿಸಿದ ಎ. ಕೆ. ಜಿ. ಚಿಕ್ಕ ವಯಸ್ಸಿನಲ್ಲಿಯೇ ಹೋರಾಟಕ್ಕೆ ದುಮುಕಿದ ವ್ಯಕ್ತಿ. ಅಂದು ಹರಿಜನರಿಗೆ ದೇವಾಲಯದೊಳಗೆ ಪ್ರವೇಶಕ್ಕಾಗಿ ಗುರುವಾಯೂರ್ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಬ್ರಿಟೀಷರನ್ನು ಓಡಿಸುವ ಸಲುವಾಗಿಯೂ ನಂತರ ಅವರಿಗಿಂತ ಕ್ರೂರಿಗಳಾದ ಬಂಡವಾಳಶಾಹಿ ಏಜೆಂಟ್ ಕಾಂಗ್ರೆಸ್ ಸರಕಾರದ ಧೋರಣೆಗಳ ವಿರುದ್ಧ ಕೊನೆಯ ಉಸಿರಿರುವವರೆಗೂ ಹೋರಾಡಿದರು. ಇದರ ಫಲಿತವಾಗಿ ಅವರ ಜೀವನದಲ್ಲಿ 17 ವರ್ಷ ಜೈಲುವಾಸ ಅನುಭವಿಸಿದರು.

ನಂತರ ಟಾಟಾ ವಿಜ್ಞಾನ ಕೇಂದ್ರ ಕೆಲಸಗಾರರ ಸಂಘದ ಕಾರ್ಯದರ್ಶಿ ಜಿ. ರಾಮುರವರು ಮಾತನಾಡುತ್ತಾ ಅವರ ಜ್ಞಾಪಕಾರ್ಥವಾಗಿ ವಾಚನಾಲಯವನ್ನು ಇಲ್ಲಿ ತೆರೆಯುವುದನ್ನು ಶ್ಲಾಘಿಸುತ್ತಾ ಇಲ್ಲಿನ ಜನತೆ ಅದರ ಉಪಯೋಗವನ್ನು ಪಡೆದು, ಬದುಕಿಗೆ ಹತ್ತಿರವಾದ ಸಾಹಿತ್ಯ ನಮಗೆ ಬೇಕೆಂದರು.

ಇಲ್ಲಿ ಬೇರೆ ಬೇರೆ ವಾಚನಾಲಯಗಳಿವೆ ಆದರೆ ಅಲ್ಲಿ ಇರುವ ಪುಸ್ತಕಗಳಲ್ಲಿ 75% ಸಾಹಿತ್ಯ ಕೆಲಸಕ್ಕೆ ಬರದೇ ಇರತಕ್ಕಂತ ಸಾಹಿತ್ಯ ಎಂದರು. ನಾವು ಇಂತಹ ವಾಚನಾಲಯಗಳನ್ನು ಪ್ರತಿಯೊಂದು ಹಳ್ಳಿಹಳ್ಳಿಯಲ್ಲಿಯೂ ತೆರೆಯಬೇಕೆಂದು ಕರೆಯಿತ್ತರು.

ನಂತರ ಕಿರ್ಲೋಸ್ಕರ್ ಕಾರ್ಮಿಕ ಮುಖಂಡ ಸುಬ್ರಮಣ್ಯಂ ಮಾತನಾಡುತ್ತಾ ನಿತ್ಯೋಪಯೋಗಿ ವಸ್ತುಗಳ ಮೇಲಿನ ಕರಭಾರದಿಂದಾಗಿ ಸಾಮಾನ್ಯ ಜನಕ್ಕೆ ಸೀಮೆಎಣ್ಣೆ ಸಿಗುತ್ತಿಲ್ಲ ಎಂದರು. ಜನತಾ ಪಕ್ಷವೂ ಕಾಂಗ್ರೆಸ್‌ಗಿಂತ ಹೊರತಾಗಿಲ್ಲ ಎಂದರು. ಹಾಗೂ ಇಂದು ನಾವು ಎ.ಕೆ.ಜಿ.ಯ ವರ್ಧಂತಿಯ ಸಂದರ್ಭದಲ್ಲಿ ಸೀಮೆಎಣ್ಣೆ ಮತ್ತು ಪ್ರಯಾಣದ ದರ ಏರಿಕೆ, ವಿರುದ್ಧ ಹೋರಾಟಕ್ಕೆ ಪ್ರತಿಜ್ಞೆ ಕೈಗೊಳ್ಳೋಣ ಎಂದರು.

ಅಧ್ಯಕ್ಷತೆ ವಹಿಸಿದ ಕಾಂ. ಎನ್. ಎಲ್. ಉಪಾಧ್ಯಾಯ ಮಾತನಾಡುತ್ತಾ ಎ.ಕೆ.ಜಿ.ಯವರೊಂದಿಗೆ ನಾನು ಸಹಾ ಕೆಲಸ ಮಾಡಿದ್ದೇನೆ: ಅವರಲ್ಲಿ ಸರಳತೆ, ಆತ್ಮೀಯತೆ, ಹಾಗೂ ಅಷ್ಟೇ ಹೋರಾಟದ ಛಲ, ಅವರಲ್ಲಿತ್ತು ಎಂದರು. "ಹೋರಾಟ ಎಲ್ಲಿಯೇ ಇರಲಿ ಅಲ್ಲಿ ಎ.ಕೆ.ಜಿ. ಇರುತ್ತಿದ್ದರು". ಕಣ್ಣಾನೂರಿನಿಂದ 750 ಮೈಲಿ ಜಾಥಾ ಹಾಗೂ ಕಾಸರಗೋಡಿನಿಂದ ತಿರುವನಂತಪುರದವರೆಗೂ ಪಾದಯಾತ್ರೆಯು, ಅಪಾರ ಮೆಚ್ಚುಗೆಯನ್ನು ಪಡೆಯಿತು. ಎರಡನೇ ವರ್ಧಂತಿ ಸಲುವಾಗಿ ಸ್ಮಾರಕ ವಾಚನಾಲಯದ ಉಪಯೋಗವನ್ನು ಯಶವಂತಪುರ ಕಾರ್ಮಿಕರು ಮತ್ತು ನಾಗರಿಕರು ಪಡೆಯಬೇಂದು ಹೇಳಿದರು. ಹಾಗೂ ಎ.ಕೆ.ಜಿ.ಯವರ ಜೀವನ ಚರಿತ್ರೆಯ ಪುಸ್ತಕವು ಕನ್ನಡದಲ್ಲಿ ಬರುತ್ತಿದೆ ಎಂದರು.

ಕಡೆಯದಾಗಿ ಕುಲಕರ್ಣಿ ವಂದನಾರ್ಪಣೆ ಮಾಡುತ್ತಾ ವಾಚನಾಲಯ ತೆರೆಯಲು ಸಹಾಯಮಾಡಿದ ಯಶವಂತಪುರ ಪಾರ್ಟಿ ಶಾಖೆಗೂ ಎಲ್ಲಾಕ್ಕಿಂತ ಮುಖ್ಯವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿಗೂ ಕೆಂಪು ವಂದನೆಗಳನ್ನು ಸಲ್ಲಿಸುತ್ತಾ ವಾಚನಾಲಯಕ್ಕೆ ಸಹಾಯ ಕೊಡುವವರಿದ್ದರೆ ಪುಸ್ತಕ ರೂಪದಲ್ಲಿ ಕೊಡಬೇಕೆಂದು ಕೇಳಿಕೊಂಡರು. ●

ದಾಂಡೇಲಿ ಕಾರ್ಮಿಕರ ಯಶಸ್ವಿ ಹೋರಾಟ

(2ನೇ ಪುಟದಿಂದ)

ರೆಯಿತು. ದಿನಾಂಕ 9ರಂದು ಜಾಮೀನಿನ ಮೇಲೆ ಎಲ್ಲಾ ಬಂಧಿತರನ್ನು ಬಿಡುಗಡೆ ಮಾಡಲಾಯಿತು. ಅಂದೇ ಕಾರ್ಮಿಕ-ಮಾಲೀಕರ ನಡುವೆ ಮಾತುಕತೆಗಳು ನಡೆದವು. ಈಗ ಶೇ. 20ಕ್ಕೆ ಕಾರ್ಮಿಕರು ಒಪ್ಪಲಿಲ್ಲ. ಕೊನೆಗೆ ಶೇ. 22 ಬೋನಸ್ ಕೊಡಬೇಕೆಂದೂ. ಹಂಗಾಮಿ ಕೆಲಸಗಾರರಿಗೂ ಅಷ್ಟೇ ಬೋನಸ್ ನೀಡಬೇಕೆಂದೂ, ಯಾವ ಕಾರ್ಮಿಕನ ಮೇಲೆಯೂ ಚಾರ್ಜ್‌ಶೀಟ್ ಹಾಕಬಾರದೆಂದೂ ಒಪ್ಪಂದವಾಗಿ, ಮುಷ್ಕರವು ಯಶಸ್ವಿಯಾಗಿ ಕೊನೆಗೊಂಡಿತು.

ದಾಂಡೇಲಿ ಕಾರ್ಮಿಕರ ಹೋರಾಟಕ್ಕೆ-ಜಯವಾಗಲಿ.

ಸಿ. ಐ. ಟಿ. ಯು- ಜಿಂದಾಬಾದ್. ●

ಬಲ ಕಮ್ಯುನಿಸ್ಟ್ ಪಾರ್ಟಿಯ ನಾಯಕರಾದ ಶ್ರೀ ಭೂಪೇಶ್‌ಗುಪ್ತರು ರಾಜ್ಯಸಭೆಯಲ್ಲಿ ವಿಶೇಷ ನ್ಯಾಯಾಲಯವನ್ನೇರ್ಪಡಿಸುವ ಕಾಯಿದೆಯ ಚರ್ಚೆಯಲ್ಲಿ ಭಾಗವಹಿಸುತ್ತಾ ಹೀಗೆಂದರು. 1975ರಲ್ಲಿ ಶ್ರೀಮತಿ ಇಂದಿರಾಗಾಂಧಿಯನ್ನು ಸ್ಥಾನಪಲ್ಲಟ ಮಾಡಿದ ಅಲಹಾಬಾದ್ ಹೈಕೋರ್ಟಿನ ತೀರ್ಪು ಬಂದಾಗಲೇ ಅವರನ್ನು ರಾಜಿನಾಮೆ ಕೊಡಬೇಕಾಗಿ ಒತ್ತಾಯ ಮಾಡಬೇಕಾಗಿತ್ತು. ಅದು ನಾವು

ಭೂಪೇಶರ ತಪ್ಪೊಪ್ಪಿಗೆ

—ದಾಮೋಧರ್

ಮಾಡಿದ ಮೊದಲನೆಯ ತಪ್ಪು. ನಾವು ಮಾಡಿದ ದೊಡ್ಡ ತಪ್ಪೇನೆಂದರೆ ಅದು ತುರ್ತುಪರಿಸ್ಥಿತಿಯನ್ನು ಜಾರಿಗೆ ತಂದಾಗ ಅದಕ್ಕೆ ಬೆಂಬಲ ಕೊಟ್ಟದ್ದು. ನಾವು ಮತ್ತೊಂದು ತಪ್ಪು ಮಾಡಲು ತಯಾರಿಲ್ಲ. ಹೀಗೆಂದು ಹೇಳಿ ವಿಶೇಷ ನ್ಯಾಯಾಲಯವನ್ನೇರ್ಪಡಿಸುವ ಕಾಯಿದೆಗೆ ತಮ್ಮ ಸಂಪೂರ್ಣ ಬೆಂಬಲವನ್ನು ಕೊಟ್ಟರು.

-ಡೆಕ್ಕನ್ ಹೆರಾಲ್ಡ್. ತಾರೀಖು: 22. 3. 79.

ಅಲಹಾಬಾದ್ ಹೈಕೋರ್ಟಿನ ತೀರ್ಪು ಬಂದಾಗ- ಇಂದಿರಾಗಾಂಧಿಗೆ ಬೆಂಬಲ ಸೂಚಿಸಲು ದೇಶದ ಅನೇಕ ಕಡೆಗಳಲ್ಲಿ ಮೆರವಣಿಗೆ ನಡೆಸಿದವರು ಈ ಬಲ ಕಮ್ಯುನಿಸ್ಟರು.

ತುರ್ತುಪರಿಸ್ಥಿತಿಯ ಕಾಲದಲ್ಲಿ ನಮ್ಮ ಸಹಸ್ರಾರು ಕಾರ್ಯಕರ್ತರನ್ನೂ ನಾಯಕರನ್ನೂ ಚಿತ್ರಹಿಂಸೆ ಮಾಡುತ್ತಿದ್ದಾಗ ಅದಕ್ಕೆ ಬೆಂಬಲ ಕೊಟ್ಟವರು ಈ ಬಲಕಮ್ಯುನಿಸ್ಟರು. ಪಶ್ಚಿಮ ಬಂಗಾಳದಲ್ಲಿ ಮಾತ್ರ ಸಾವಿರಕ್ಕೂ ಹೆಚ್ಚಿನ ಕಾರ್ಯಕರ್ತರನ್ನು ಕೊಲೆ ಮಾಡುತ್ತಿರುವಾಗ ಇವರು ಸಿದ್ಧಾರ್ಥಶಂಕರ್‌ರೇಗೆ ಗಂಟೆ ಭಾರಿಸುತ್ತಿದ್ದರು.

ಕೇರಳದಲ್ಲಿ ಇವರೇ ಅಧಿಕಾರದಲ್ಲಿದ್ದು ನಮ್ಮ ನಾಯಕರನ್ನೂ ಕಾರ್ಯಕರ್ತರನ್ನು ಸೆರೆಮನೆಗೆ ತಳ್ಳಿದರಷ್ಟೇ ಅಲ್ಲದೆ ರಾಜನ್‌ನಂತಹ ಅನೇಕರನ್ನು ಕೊಲೆ ಮಾಡಿದ್ದು ಈ ತುರ್ತುಪರಿಸ್ಥಿತಿಯಲ್ಲೆ. ಕಲ್ಲಿಕೋಟೆಯ ಹತ್ತಿರದ ಕಕ್ಕಯಂ ಎಂಬ ಸ್ಥಳದಲ್ಲಿ ಪೋಲೀಸ್ ಠಾಣೆಯನ್ನು ಏರ್ಪಡಿಸಿ ನಮ್ಮ ಪಾರ್ಟಿಯ ಕಾರ್ಯಕರ್ತರನ್ನು ಚಿತ್ರಹಿಂಸೆ ಮಾಡುತ್ತಿದ್ದಾರೆಂದು ಕಾಂ. ಇ. ಎಮ್. ಎಸ್. ನವರು ಆಗಿನ ವಿಧಾನ ಸಭೆಯಲ್ಲಿ ಹೇಳಿದಾಗ ಅದನ್ನು ಹೀಯಾಳಿಸಿದವರು ಈ ಬಲ ಕಮ್ಯುನಿಸ್ಟರು.

ಈಗ ಅವರು ತಾವು ಮಾಡಿದ ತಪ್ಪನ್ನು ಒಪ್ಪಿಕೊಳ್ಳುತ್ತಾರಂತೆ. ಮಾರ್ಕ್ಸ್‌ವಾದ - ಲೆನಿನ್‌ವಾದವನ್ನು ಬಿಟ್ಟು ಪರಿಷ್ಕರಣವಾದದಲ್ಲಿ ಮುಳುಗಿದವರಿಗೆ ಇದೇ ಗತಿ ಬರುವುದು. ಅವರು ಅನುಸರಿಸಿಕೊಂಡು ಬರುತ್ತಿರುವುದು ದ್ವಂದವಾನ ಭೌತಿಕವಾದವಲ್ಲ-ದ್ವಂದಮಾನ ಹೊಟ್ಟೆಪಾಡು. ●

ಸಾಲಗಳ ವಸೂಲಾತಿಯನ್ನು ನಿಲ್ಲಿಸದಿದ್ದರೆ ಆಲೂಗೆಡ್ಡೆ ಬೆಳೆಗಾರರ ಸತ್ಯಾಗ್ರಹ

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಅಕಾಲಿಕ ಮಳೆಯಾದುದರಿಂದ ಆಲೂಗೆಡ್ಡೆ ಬೆಳೆಗೆ ಅಪಾರ ಹಾನಿಯಾಗಿದೆ. ಸುಮಾರು ಮೂರು ಕೋಟಿ ರೂಗಳ ನಷ್ಟದ ಅಂದಾಜು ಮಾಡಲಾಗಿದೆ. ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಮಳೆ ಬರದೆ ಇದ್ದಿದ್ದರೆ, ಆಲೂಗೆಡ್ಡೆ ಫಸಲು ರೈತರ ಕೈಸೇರಿ ಬ್ಯಾಂಕು, ಸೊಸೈಟಿಗಳ ಸಾಲವನ್ನು ಪಾವತಿ ಮಾಡಬಹುದಿತ್ತು. ಈಗ ಬ್ಯಾಂಕು ಮತ್ತು ಸೊಸೈಟಿಗಳ ಸಾಲಗಾರರು ರೈತರ ಮನೆಗಳನ್ನು ಜಪ್ತಿ ಮಾಡಿಸಿ ಕೈಗೆ ಸಿಕ್ಕಿದ ಪಾತ್ರೆ ಪಡಗಗಳನ್ನು ತಮ್ಮ ಸಾಲಕ್ಕಾಗಿ ಹರಾಜು ಹಾಕಿಸುತ್ತಿದ್ದಾರೆ.

ಆದ್ದರಿಂದ, 13-3-79ರಂದು ರೈತನಾಯಕರು ಮತ್ತು ರೈತರು ಪಟ್ಟಣದ ಮುಖ್ಯಬೀದಿಗಳಲ್ಲಿ ಮೆರವಣಿಗೆ ನಡೆಸಿ, ಬಹಿರಂಗ ಸಭೆಯಲ್ಲಿ ಬ್ಯಾಂಕು ಮತ್ತು ಸೊಸೈಟಿಗಳ ಮಾರವಾಡಿ ನೀತಿಯನ್ನು ಖಂಡಿಸಿದ್ದಾರೆ. ಸರ್ಕಾರ ತನ್ನ ತಾಟಸ್ಥ್ಯ ನೀತಿಯನ್ನು ಬಿಟ್ಟು ಮಧ್ಯೆ ಪ್ರವೇಶಿಸಿ ಕಷ್ಟದಲ್ಲಿರುವ ರೈತರಿಗೆ ಸಾಲ ಮತ್ತು ಸುಸ್ತಿ ಬಡ್ಡಿಗಳನ್ನು ತಾತ್ಕಾಲಿಕ ಮನ್ನಾ ಮಾಡಬೇಕೆಂದೂ ಇಲ್ಲದಿದ್ದರೆ ಸತ್ಯಾಗ್ರಹ ಹೂಡುವುದಾಗಿಯೂ ರೈತರು ತಿಳಿಸಿದ್ದಾರೆ.

ಸಭೆಯಲ್ಲಿ ಸಿ.ವಿ. ವೆಂಕಟರಾಯಪ್ಪ, ವೈ. ಶ್ರೀರಾಮುಲು, ಪಿ. ಜಿ. ಅಶ್ವತ್ಥಪ್ಪ, ಕೆ. ಎಂ. ಮುನಿಯಪ್ಪ, ಎಸ್. ಲಕ್ಷ್ಮಯ್ಯ ಇವರುಗಳು ಮಾತನಾಡಿದರು.

ಕೋಣಿ ಯುವಕ ಮಂಡಳಿ ವಾರ್ಷಿಕೋತ್ಸವ

ಕುಂದಾಪುರದ ಕೋಣಿಗ್ರಾಮದ ಯುವಕ ಮಂಡಳಿಯ 3ನೇ ವಾರ್ಷಿಕೋತ್ಸವವು ನಗರಸಭೆಯ ಉಪಾಧ್ಯಕ್ಷ ಶ್ರೀ ಅಬ್ರಹಾಂ ಕರ್ಕಡ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ದಕ್ಷಿಣವಲಯ ವಿಮಾನೌಕರರ ಫೆಡರೇಷನ್ ಉಪಾಧ್ಯಕ್ಷ ಶ್ರೀ ಬಿ. ಮಾಧವ ಅವರು ಮುಖ್ಯ ಅತಿಥಿಗಳಾಗಿದ್ದರು. ಸಂಸ್ಥೆಗೆ ಅನೇಕ ಕಡೆಗಳಿಂದ ಶುಭಾಶಯಗಳು ಬಂದಿದ್ದವು. ●

ವೀವರ್ಸ್ ಯೂನಿಯನ್ನಿನ ಸಭೆ

20-3-79 ರಂದು ಎಸ್. ಕೆ. ವೀವರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿ ಸಭೆಯು ಮಂಗಳೂರಿನಲ್ಲಿ ಕಾಂ. ಬಿ. ನಾರಾಯಣರವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ವಾರ್ಷಿಕ ವರದಿಯನ್ನು ಕೆ. ಪಿ. ಸಾಲಿಯಾನ್ ಅವರು ಮಂಡಿಸಿದ ಮೇಲೆ, ಏಪ್ರಿಲ್‌ನಲ್ಲಿ ಮದರಾಸಿನಲ್ಲಿ ನಡೆಯಲಿರುವ ಸಿ.ಐ.ಟಿ.ಯು ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಕೆ. ಮಾರಪ್ಪ ಅವರನ್ನು ಆಯ್ಕೆ ಮಾಡಲಾಯಿತು. ●

ರಾಜ್ಯಸರ್ಕಾರಿ ನೌಕರರಿಂದ ವಿಧಾನಸೌಧ ಚಲೋ

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಆದೇಶದ ಮೇರೆಗೆ ದಿನಾಂಕ 23-3-1979ನೇ ಶುಕ್ರವಾರ ಸಂಜೆ ಬೆಂಗಳೂರಿನ ರಾಜ್ಯ ಸರಕಾರಿ ನೌಕರರು ಸಹಸ್ರಾರು ಸಂಖ್ಯೆಯಲ್ಲಿ ಮೆರವಣಿಗೆ ನಡೆಸಿ, ಘೋಷಣೆಗಳನ್ನು ಕೂಗುತ್ತಾ 'ವಿಧಾನಸೌಧ ಚಲೋ' ಕಾರ್ಯಕ್ರಮವನ್ನು ಆಚರಿಸಿದರು. ಕೇಂದ್ರಮಟ್ಟದ ತುಟ್ಟಿಭತ್ತೆ, ಬೋನಸ್ ನೀಡಿಕೆ, ಮುಷ್ಕರ ಪ್ರತಿಬಂಧಕ ಕರಾಳ ಶಾಸನದ ರದ್ದತಿ, ರಹಸ್ಯ ವರದಿಯನ್ನು ರದ್ದುಪಡಿಸುವುದು ಇವೇ ಮೊದಲಾದ ತಮ್ಮ 12 ಮುಖ್ಯ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಕಾಮ್ರೇಡ್ ಕೆ. ಎ. ಕೇಶವಮೂರ್ತಿಯವರ ನೇತೃತ್ವದಲ್ಲಿ ವಿಧಾನಸಭೆಯ ಹಾಗೂ ವಿಧಾನಪರಿಷತ್ತಿನ ಅಧ್ಯಕ್ಷರುಗಳಿಗೆ ಅರ್ಪಿಸಲಾಯಿತು. ನೌಕರರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವ ಆಶ್ವಾಸನೆಯಿತ್ತರು. ತಮ್ಮ ಬೇಡಿಕೆಗಳ ಬಗ್ಗೆ ಸರಕಾರದ ಗಮನ ಸೆಳೆಯಲು ನಡೆಸುತ್ತಿರುವ ಸರದಿ ಉಪವಾಸ ಮುಷ್ಕರ ಮುಂದುವರಿಯುತ್ತಿದೆ. ●

ಬೀಡಿ ಕಾರ್ಮಿಕರ ಐಕ್ಯ ಕಾರ್ಯಾಚರಣೆಗೆ ಕರೆ

ಕರ್ನಾಟಕ ರಾಜ್ಯದ ಬೀಡಿ ಕಾರ್ಮಿಕರ ಫೆಡರೇಷನ್ ಸಭೆ ಕಾಂ. ಸೂರ್ಯನಾರಾಯಣರಾವ್ ರವರ ಅಧ್ಯಕ್ಷತೆಯಲ್ಲಿ 25-3-79ರಂದು ಸೇರಿತು. ಸದರಿ ಸಭೆಯಲ್ಲಿ ಕೇಂದ್ರ ಸರಕಾರ ಲೇಬಲ್ ಬೀಡಿ ಮೇಲೆ ಸಾವಿರಕ್ಕೆ 3;60 ಪೈಸೆ ತೆರಿಗೆ ವಿಧಿಸಿರುವುದನ್ನು ಸಭೆ ಖಂಡಿಸಿತು. ಲೇಬಲ್ ಬೀಡಿಉದ್ಯಮದಲ್ಲಿ ದುಡಿಯುವ, ಬೀಡಿ ಕಾರ್ಮಿಕರ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಈ ತೆರಿಗೆಯನ್ನು ರದ್ದುಮಾಡಬೇಕೆಂದು ಈ ಸಭೆ ಸರಕಾರವನ್ನು ಒತ್ತಾಯಿಸುವ ತೀರ್ಮಾನ ಮಾಡಿತು.

ಮತ್ತೊಂದು ತೀರ್ಮಾನದಲ್ಲಿ ಕಂಟ್ರಾಕ್ಟ್ ಪದ್ಧತಿ ರದ್ದು, ಎಲೆ, ಆವರೇಜ್ ಕಡಿತ, ಪ್ರಾವಿಡೆಂಟ್ ಫಂಡ್, ಜಾರಿ ಮೊದಲಾದವುಗಳ ಬಗ್ಗೆ ಜಂಟಿ ಕಾರ್ಯಕ್ರಮ ನಡೆಸಲು ಬೀಡಿ ಕಾರ್ಮಿಕರ ಮಧ್ಯೆ ಕೆಲಸ ಮಾಡುವ ಇತರೆ ಕಾರ್ಮಿಕ ಸಂಘಗಳೊಡನೆ ಸಮಾಲೋಚಿಸಿ ಐಕ್ಯ ಹೋರಾಟ ನಡೆಸಬೇಕೆಂದು ತೀರ್ಮಾನಿಸಿತು.

ಮತ್ತು ರಾಜ್ಯಸರಕಾರ ಈ ಕೂಡಲೆ ಪುನರ್ ವಿಮರ್ಶಿತ ಕನಿಷ್ಟ ಕೂಲಿಯನ್ನು ಪ್ರಕಟಿಸಬೇಕೆಂದು ಸರಕಾರವನ್ನು ಒತ್ತಾಯಿಸಿತು. ಬೀಡಿ ಫೆಡರೇಷನ್ ಸಭೆಗೆ ದ. ಕ. ಜಿಲ್ಲೆ, ಹರಿಹರ, ತುಮಕೂರು, ಶಿರಾ, ಬೆಂಗಳೂರು, ಕೋಲಾರ, ಕುಣಿಗಲ್, ಮೊದಲಾದ ಕಡೆಗಳಿಂದ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು. ●

ಕಾರ್ಮಿಕ ವಿವಾದ ಇತ್ಯರ್ಥ: ವೇತನ ಹೆಚ್ಚಳ

ಬೆಂಗಳೂರಿನ ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟಿನಲ್ಲಿರುವ ಆಗ್ರೋ ಎಕ್ಸ್‌ಟ್ರ್ಯಾಕ್ಟ್ಸ್ ಮತ್ತು ಕಂಟ್ರೋಲ್ ಇನ್‌ಸ್ಟ್ರುಮೆಂಟ್ಸ್ ಪ್ರೈ. ಲಿ. ಹಾಗೂ ಸಿ. ಐ. ಟಿ. ಯು. ನೇತೃತ್ವದ ಬೆಂಗಳೂರ್ ಇಂಡಸ್ಟ್ರಿಯಲ್ ವರ್ಕರ್ಸ್ ಅಂಡ್ ಕಮರ್ಶಿಯಲ್ ಎಂಪ್ಲಾಯೀಸ್ ಯೂನಿಯನ್‌ಗಳ ನಡುವೆ ಕಾರ್ಮಿಕರ ಬೇಡಿಕೆಗಳ ಬಗ್ಗೆ ಮಾತುಕತೆ ನಡೆದು ಕಳೆದವಾರ ಒಂದು ಒಪ್ಪಂದಕ್ಕೆ ಬರಲಾಯಿತು. ಈ ಒಪ್ಪಂದದ ರೀತ್ಯ ಕಾರ್ಮಿಕರ ವೇತನದಲ್ಲಿ 40 ರೂ ಹೆಚ್ಚಳವಾಗಿದೆ.

ಸಂಘದ ಕಾರ್ಯದರ್ಶಿ ಕಾಂ. ವಿ. ಜಿ. ಕೆ. ನಾಯರ್ ಸಹಕಾರ್ಯದರ್ಶಿ ಕಾಂ. ಕುಲಕರ್ಣಿ ಹಾಗೂ ಕಾರ್ಮಿಕರಾದ ಕಾಂ. ತಂಬಿ, ಜಗದೀಶ, ಮೂರ್ತಿ, ರಾಮಚಂದ್ರ ಇವರುಗಳು ಸಂಘದ ಪರವಾಗಿ ಕಾರ್ಮಿಕರನ್ನು ಪ್ರತಿನಿಧಿಸಿದ್ದರು.

●

ತಿತಿಮತಿ ರೈತರ ಸತ್ಯಾಗ್ರಹ ಮನವಿ ಪತ್ರ ಅರ್ಪಣೆ

ತಮ್ಮನ್ನು ಒಕಲೆಬ್ಬಿಸುತ್ತಿರುವುದರ ವಿರುದ್ಧ ಕೊಡಗುಜಿಲ್ಲೆಯ ವೀರಾಜಪೇಟೆ ತಾಲ್ಲೋಕು ತಿತಿಮತಿ ರೈತರು ಜಿಲ್ಲಾ ರೈತಸಂಘದ ನೇತೃತ್ವದಲ್ಲಿ ಮಾ. 23ರಂದು ತಾಲ್ಲೋಕ್ ಕಛೇರಿ ಮುಂದೆ ಧರಣಿ ಸತ್ಯಾಗ್ರಹ ಆಚರಿಸಿದರು. ಈ ಸತ್ಯಾಗ್ರಹದ ನಾಯಕತ್ವವನ್ನು ಕರ್ನಾಟಕ ಪ್ರಾಂತ ರೈತಸಂಘದ ಸದಸ್ಯ ಕಾಂ. ಪಿ. ಜಗನ್ನಾಥ್ ವಹಿಸಿದ್ದರು. ಅಂದು ಸಂಜೆ ತಹಶೀಲ್ದಾರ್ ಅವರಿಗೆ ಮನವಿಪತ್ರವೊಂದನ್ನು ಅರ್ಪಿಸಲಾಯಿತು.

ರೈತ ಸಂಘದ ನ್ಯಾಯಬದ್ಧವಾದ ಈ ಹೋರಾಟಕ್ಕೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಅನೇಕ ಕಾರ್ಮಿಕ ಸಂಘಗಳು ತಮ್ಮ ಬೆಂಬಲ ವ್ಯಕ್ತಪಡಿಸಿವೆ.

ತಮ್ಮ ಬೇಡಿಕೆಗಳು ಈಡೇರದಿದ್ದರೆ ಫಾರೆಸ್ಟ್‌ರೇಂಜ್ ಕಛೇರಿಯ ಮುಂದೆ ಸರದಿ ಉಪವಾಸ ಮುಷ್ಕರ ಹೂಡುವುದಾಗಿಯೂ ಮತ್ತು ಇದಕ್ಕೆ ನ್ಯಾಯಪ್ರಿಯ ಜನರೆಲ್ಲರೂ ಸಹಕರಿಸಬೇಕೆಂದು ಜಿಲ್ಲಾ ರೈತಸಂಘದ ಸಂಚಾಲಕ ಎ. ಕೆ. ಕೃಷ್ಣ ತಿಳಿಸಿದ್ದಾರೆ. ●

ಆಕ್ಟ್ರಾಯಿ ಸರದಾರರಿಗೆ ಸಂರಕ್ಷಣೆ

ನಮ್ಮ ರಾಜ್ಯದಲ್ಲಿ ನಗರಸಭೆಗಳು ವಸೂಲಿ ಮಾಡುತ್ತಿರುವ ಆಕ್ಟ್ರಾಯಿ ತೆರಿಗೆಯನ್ನು ಇದೇ ಏಪ್ರಿಲ್ 1ರಿಂದ ನಿಲ್ಲಿಸಲಾಗುವುದೆಂದು ರಾಜ್ಯದ ಆರ್ಥಿಕ ಮಂತ್ರಿ ಎಸ್. ಎಂ. ಯಾಹ್ಯಾ ಅವರು ವಿಧಾನಸಭೆಯಲ್ಲಿ ಪ್ರಕಟಮಾಡಿರುವುದರಿಂದ ನಗರಸಭೆಗಳಲ್ಲಿ ಕೆಲಸಮಾಡುತ್ತಿರುವ ಸಾವಿರಾರು ನಾಕಾ ನೌಕರದಾರರ ನೌಕರಿ ಭದ್ರತೆ ಏನೆಂಬುದು ತಿಳಿದಿಲ್ಲ. ಈ ನೌಕರದಾರರನ್ನು ನೌಕರಿಯಿಂದ ಕಿತ್ತುಹಾಕದೆ, ಇವರಿಗೆ ನಗರಸಭೆಗಳಲ್ಲಿ ಖಾಲಿಯಿದ್ದ ಜಾಗದಲ್ಲಿ ನೇಮಿಸಿಕೊಳ್ಳಬೇಕೆಂದೂ, ಹಾಗೆಯೇ ಸರಕಾರದ ಇತರ ಶಾಖೆಗಳಲ್ಲಿ ಇವರ ಸರ್ವಿಸಿಗೆ ಅನ್ಯಾಯವಾಗದ ರೀತಿಯಲ್ಲಿ ಸೇರಿಸಿಕೊಳ್ಳಬೇಕೆಂದೂ ಕರ್ನಾಟಕ ರಾಜ್ಯದ ನಗರಸಭೆ ನೌಕರದಾರ ಫೆಡರೇಷನ್ನಿನ ಉಪಾಧ್ಯಕ್ಷರಾದ ಎನ್. ಕೆ. ಉಪಾಧ್ಯಾಯ ಮತ್ತು ಸಂಘಟನಾ ಕಾರ್ಯದರ್ಶಿ ಡಿ. ಎಂ. ಖಲಾಸಿಯವರು ತಾ|| 26 ರಂದು ಶ್ರೀ ಶ್ರೀಕಂಠಯ್ಯ, ನಗರಸಭೆ ಮಂತ್ರಿಯವರಿಗೆ ಮನವಿ ಅರ್ಪಿಸಿ ಕೇಳಿಕೊಂಡಿದ್ದಾರೆ. ●

ಸಿ.ಪಿ.ಐ. (ಎಂ) ಮೆರವಣಿಗೆ ೩೦ ಜನರ ಬಂಧನ

(1ನೇ ಪುಟದಿಂದ)

ಮುಖ್ಯಮಂತ್ರಿಗಳನ್ನು ಕಂಡು ಬೆಲೆ ಏರಿಕೆ ಬಗ್ಗೆ ಮನವಿಪತ್ರವನ್ನು ಅರ್ಪಿಸಬೇಕೆಂದು ಹೇಳಿದ ಪಕ್ಷದ ಮುಖಂಡರ ಮನವಿಗೆ, ಶ್ರೀ ದೇವರಾಜ ಅರಸರು ಭೇಟಿಗೆ ಸಮಯವಿಲ್ಲವೆಂದು ಹೇಳಿ ಕಳಿಸಿದರು. ನಮ್ಮ ಮನವಿ ಕೇಳದ ಹೊರತು ವಾಪಸ್ಸು ಹೋಗುವುದಿಲ್ಲವೆಂದು ಮೆರವಣಿಗಕಾರರು ಸುಮಾರು ಒಂದುವರೆ ಗಂಟೆ ರಸ್ತೆಯಲ್ಲೇ ಕುಳಿತರು. ಪೋಲೀಸರು ಬಂಧಿಸುವುದಾಗಿ ಹೇಳಿದ ಬೆದರಿಕೆಯ ಮಾತುಗಳು ನಡೆಯಲಿಲ್ಲ.

ಇದೇ ಸಮಯದಲ್ಲಿ, ಜನತೆಯ ಕೂಗನ್ನು ಕೇಳಲು ಇಷ್ಟ ಪಡದ ಸರ್ಕಾರಕ್ಕೆ ಜನಗಳ ತೊಂದರೆಯನ್ನು ಕೇಳಿಸಲು 3 ಜನ ಯುವತಿಯರೂ ಸೇರಿದಂತೆ, ಒಟ್ಟು 30 ಜನರ ತಂಡವೊಂದು ಪೋಲೀಸರ ಕಾವಲನ್ನು ಭೇಧಿಸಿಕೊಂಡು ವಿಧಾನಸೌಧದ ಒಳಗೆ ನುಗ್ಗಿದರು. ಕರಪತ್ರಗಳನ್ನು ತೂರಿ, ಘೋಷಣೆಗಳನ್ನು ಕೂಗಿದಾಗ, ವಿಧಾನ ಸೌಧದಲ್ಲಿ ಕೆಲಸ ಮಾಡುವ ಬಿಳಿ ಕಾಲರ್ ಕಾರ್ಮಿಕರು ಹಾಗೂ ಸಾರ್ವಜನಿಕರು ಅಧಿಕ ಸಂಖ್ಯೆಯಲ್ಲಿ ಸೇರತೊಡಗಿದರು. 15 ನಿಮಿಷಗಳ ಪ್ರದರ್ಶನ, ಘೋಷಣೆಗಳ ನಂತರ ಏಳೆಂಟು ಪೋಲೀಸರು ಒಳಗೆ ನುಗ್ಗಿ ಬಲಾತ್ಕಾರವಾಗಿ ಪ್ರದರ್ಶನಕಾರರನ್ನು ವಿಧಾನ ಸೌಧದ ಗೇಟಿನ ಹೊರಗೆ ಕರೆದುಕೊಂಡು ಬರುವಾಗ ಪ್ರದರ್ಶನಕಾರರ ಮೇಲೆ ಲಾಠಿ ಛಾರ್ಜು ಮಾಡಿದರು. ಕೆಲವರನ್ನು ಕುತ್ತಿಗೆ ಹಿಡಿದು ದೂಡಿದರು, ಸುಮಾರು 12 ಮಂದಿಗೆ ಲಾಠಿ ಹೊಡೆತದಿಂದ ತೀವ್ರವಾದ ಪೆಟ್ಟುಗಳಾಗಿವೆ. ಆದರೂ ಪ್ರದರ್ಶನಕಾರರು ವಿಧಾನಸೌಧದ ಗೇಟಿನ ಮುಂದೆ ಕುಳಿತು ಪೋಲೀಸರ ದಬ್ಬಾಳಿಕೆ ಹಾಗೂ ಸರ್ಕಾರದ ನೀತಿಯನ್ನು ಖಂಡಿಸಿ ಘೋಷಣೆಗಳನ್ನು ಕೂಗಿದಾಗ ಪೋಲೀಸರು ಎಲ್ಲರನ್ನೂ ಬಂಧಿಸಿ ಕರೆದೊಯ್ದರು. 28 ಜನರ ಮೇಲೆ ಅತಿಕ್ರಮ ಪ್ರವೇಶ ಹಾಗೂ ಶಾಂತಿ ಭಂಗದ ಆರೋಪದ ಮೇಲೆ ಕೇಸು ದಾಖಲು ಮಾಡಿದ್ದಾರೆ. ಪ್ರದರ್ಶನಕಾರರನ್ನು ಜಾಮೀನಿನ ಮೇಲೆ ಸಂಜೆ ಬಿಡುಗಡೆ ಮಾಡಿದರು.

ಬಂಧಿತರಾದವರಲ್ಲಿ ಮೂವರು ಮಹಿಳೆಯರೂ ಸೇರಿದಂತೆ ಸಿ.ಐ.ಟಿ.ಯು. ನಾಯಕರಾದ ಕಾಂ. ಅನಂತ ರಾಮ್, ಕುಲಕರ್ಣಿ, ರಾಜ್ಯ ಎಸ್. ಎಫ್.ಐ. ಘಟಕದ ಅಧ್ಯಕ್ಷರಾದ ಕಾಂ. ಇಕ್‌ಬಾಲ್‌ಹುಸೇನ್, ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಹಾಗೂ ಜಿಲ್ಲಾ ಘಟಕದ ಕಾರ್ಯದರ್ಶಿ ಕಾಂ. ಗೋಪಾಲಕೃಷ್ಣ ಅವರೂ ಸೇರಿದ್ದಾರೆ.

ನಂತರ, ಮುಖ್ಯಮಂತ್ರಿಗಳು ಪಕ್ಷದ ನಾಯಕರಾದ ಕಾಂ. ಎನ್. ಎಲ್. ಉಪಾಧ್ಯಾಯ, ಕಾಂ. ಸೂರ್ಯನಾರಾಯಣರಾವ್ ಹಾಗೂ ಕಾಂ. ವಿ. ಜಿ. ಕೆ. ನಾಯರ್‌ರವರನ್ನು ಒಳಗೊಂಡ ನಿಯೋಗಕ್ಕೆ ಸಂದರ್ಶನ ನೀಡಿ "ಸಾಕಷ್ಟು ಸೀಮೆಎಣ್ಣೆ ಒದಗಿಸಲು ಭರವಸೆ ನೀಡಿದ್ದಲ್ಲದೆ, ಕಾರ್ಮಿಕರಿಗೆ ಬಸ್ಸು ರಿಯಾಯಿತಿ" ಕೊಡಲು ಒಪ್ಪಿಕೊಂಡರು. ಉಳಿದ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಭರವಸೆ ನೀಡಿದರು.

ಪರಿಸರ

ಭಾರತ ದೇಶದಲ್ಲಿ ಟಿ. ಬಿ. ಕಾಯಿಲೆಯಿಂದ ಪ್ರತಿವರ್ಷ 500000 ಜನ ಸಾಯುತ್ತಿದ್ದಾರೆ.

ನಮ್ಮ ಹಳ್ಳಿಗಳಲ್ಲಿ ಹುಟ್ಟುವ ಪ್ರತಿ 100 ಮಕ್ಕಳಲ್ಲಿ 15 ಮಕ್ಕಳು ಪೌಷ್ಟಿಕ ಆಹಾರದ ಕೊರತೆಯಿಂದಾಗಿ 5 ವರ್ಷದ ಒಳಗೇ ಸಾಯುತ್ತಾರೆ.

ಕೇಂದ್ರ ಆರೋಗ್ಯ ಸಚಿವ ರವಿರಾಯ್

ಕರ್ನಾಟಕದಲ್ಲಿ ಐದು ಲಕ್ಷ ಮಾನಸಿಕ ರೋಗಿಗಳಿದ್ದಾರೆ. ಮನೋರೋಗ ಚಿಕಿತ್ಸೆಯ ಸೌಲಭ್ಯವೆಲ್ಲಾ ಬೆಂಗಳೂರು–ಮೈಸೂರು–ದಾವಣಗೆರೆ–ಧಾರವಾಡಗಳಂತಹ ನಗರಗಳಲ್ಲಿ ಕೇಂದ್ರೀಕೃತವಾಗಿದ್ದು ಗ್ರಾಮಾಂತರ ಪ್ರದೇಶಗಳಿಗೂ ಚಿಕಿತ್ಸಾ ಸೌಲಭ್ಯ ಸಿಗುವುದು ಅಗತ್ಯವಾಗಿದೆ.

"ಸಂಯುಕ್ತ ಕರ್ನಾಟಕ"

ಸಿ. ಐ. ಟಿ. ಯು. ಆಶ್ರಯದಲ್ಲಿ ಇತ್ತೀಚೆಗೆ ಮಂಗಳೂರಿನಲ್ಲಿ ಜರುಗಿದ ದುಡಿಯುವ ಮಹಿಳೆಯರ ಸಮ್ಮೇಳನದಲ್ಲಿ ಭಾಗವಹಿಸಿದ್ದ ಮಹಿಳೆಯರು ಪಾಶ್ಚಿಮಾತ್ಯ ದೇಶಗಳ ಸ್ತ್ರೀ ವಿಮೋಚನಾಕಾರರಂತಿರಲಿಲ್ಲ. ತಮ್ಮನ್ನು ಕೇವಲ ಮಹಿಳೆಯರಂತೆ ಕಾಣದೆ ಕಾರ್ಮಿಕರಹಾಗೆ ನೋಡಬೇಕು ಮತ್ತು ತಮ್ಮ ದುಡಿಮೆಗೆ ತಕ್ಕ ಪ್ರತಿಫಲ ಕೊಡಬೇಕು ಎಂಬ ಹೋರಾಟದ ಪಥದಲ್ಲಿ ಇದ್ದ ಮಹಿಳೆಯರು ಅವರಾಗಿದ್ದರು.

"ಇಂಡಿಯನ್ ಎಕ್ಸ್‌ಪ್ರೆಸ್"ನಲ್ಲಿ ರೀಮಾಕಶ್ಯಪ್.

ಮಹಿಳೆಯರ ಹಿತಾಸಕ್ತಿಗಳನ್ನಿಟ್ಟುಕೊಂಡಿರುವ ನಿಯಮಾವಳಿಗಳು ಬರೀ ಬಿಳಿ ಹಾಳೆಗಳಲ್ಲಿ ಮಾತ್ರ. ಸಮಾನ ವೇತನ, ಹೆರಿಗೆಭತ್ಯ, ಪ್ಲಾಂಟೇಷನ್ ಕಾರ್ಮಿಕರ ಮಸೂದೆ, ಫ್ಯಾಕ್ಟರಿ ಮಸೂದೆಗಳಲ್ಲಿರುವ ಎಲ್ಲಾ ಅನುಕೂಲಗಳೂ, ಮಕ್ಕಳ ಪೋಷಣೆಗೆ ಅನುಕೂಲ ಒದಗಿಸುವ ಹೊಸ ನಿಯಮಾವಳಿಗಳೂ ಬೇಕು. ಈ ದೃಷ್ಟಿಯನ್ನಿರಿಸಿಕೊಂಡು ಮಂಗಳೂರಿನಲ್ಲಿ ಇತ್ತೀಚೆಗೆ ಸಿ. ಐ. ಟಿ. ಯು. ಆಶ್ರಯದಲ್ಲಿ ಜರುಗಿದ ಕರ್ನಾಟಕದ ದುಡಿಯುವ ಮಹಿಳೆಯರ ಸಮ್ಮೇಳನ ಪ್ರಾಯಶಃ ಪ್ರಪ್ರಥಮವಾದದ್ದು ಮತ್ತು ಅದೊಂದು ಯಶಸ್ವಿಸಮ್ಮೇಳನ.

"ಸಂಯುಕ್ತ ಕರ್ನಾಟಕ"ದಲ್ಲಿ ಎನ್. ಗಾಯಿತ್ರಿದೇವಿ.

ನಮ್ಮ ದೇಶದಲ್ಲಿ 1,95,000 ಇಂಜಿನಿಯರ್‌ಗಳು, 30 ಸಾವಿರಜನ ಡಿಪ್ಲಮೋಧಾರರ, 4 ಸಾವಿರ ವೈದ್ಯರು, 6 ಸಾವಿರ ಕೃಷಿ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದ ತಂತ್ರಜ್ಞರು ನಿರುದ್ಯೋಗಿಗಳಾಗಿದ್ದಾರೆ.

"ದಿ ಇಂಡಿಯನ್ ಲೇಬರ್"

1978ರ ಡಿಸೆಂಬರ್ 31ರ ವರೆಗೆ ಕೇಂದ್ರ ಸರ್ಕಾರಕ್ಕೆ ಬರಬೇಕಾದ ಆದಾಯ ತೆರಿಗೆ ಬಾಕಿ 730 ಕೋಟಿ 30 ಲಕ್ಷ ರೂಪಾಯಿಗಳು.

"ದಿ ಕಾಮರ್ಸ್"

ಕಳೆದ 10 ವರ್ಷಗಳಲ್ಲಿ ನಮ್ಮ ರಾಜ್ಯದ ಮಂತ್ರಿಗಳ ಕೈಗೆ ಮತ್ತು ಅವರ ಹಿಂದೆ ಇರುವ ಪುಡಾರಿಗಳ ಕೈಗೆ ರಾಜ್ಯದ ಏನಿಲ್ಲೆಂದರೂ 50 ಕೋಟಿ ರೂಗಳು ಹೋಗಿದೆ. ಇದನ್ನು ಸಾಬೀತುಪಡಿಸಲು ನನ್ನಲ್ಲಿ ಸಾಕಷ್ಟು ಸಾಕ್ಷಾಧಾರಗಳಿವೆ.

ಶ್ರೀ ಕೆ. ಶ್ರೀ ರಾಮುಲು ಕರ್ನಾಟಕದ ಮಾಜಿ ಮಂತ್ರಿಗಳು.

ಕೇಂದ್ರ ಗೃಹಖಾತೆಯ ದಿಲ್ಲಿಯ ಅಶೋಕ ಹೋಟೆಲಿನಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ಊಟದ ಬೆಲೆ 75 ರೂ! ಆದರೆ ಈ ದೇಶದ ಶೇ. 45ರಷ್ಟು ಜನತೆಗೆ ಇಡೀ ದಿವಸಕ್ಕೆ 75 ಪೈಸೆಯ ಆದಾಯವೂ ಇಲ್ಲ. ಜನತಾ ಸರ್ಕಾರವು ಬಡವ–ಶ್ರೀಮಂತರ ನಡುವಣ ಅಂತರವನ್ನು 1 : 10ಕ್ಕೆ ಇಳಿಸುತ್ತಿರುವ ವೈಖರಿ ಇದು.

"ಜನತಾ ಮಾಧ್ಯಮ" ದಲ್ಲಿ ವಾಚಕರೊಬ್ಬರ ಪತ್ರ.

ಹೋರಾಟಕ್ಕೆ ಎಸ್.ಎಫ್.ಐ.ಕರೆ

ಎಸ್. ಎಫ್. ಐ. ಸೆಕ್ರಟಾರಿಯಟ್ ಸಭೆ ಸೇರಿ, ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನ ವಿರೋಧಿ ಬಜೆಟ್‌ಗಳ ಪರಿಣಾಮವಾಗಿ ವಿದ್ಯಾರ್ಥಿಗಳು ಬಸ್ಸಿನ ರಿಯಾಯಿತಿ ದರದಲ್ಲಿ ಕಡಿತ ಮಾಡಿರುವುದರ ಪರಿಣಾಮವಾಗಿ ಹಾಗೂ ಸೀಮೆಎಣ್ಣೆಯ ಅಭಾವದಿಂದಾಗಿ ತೊಂದರೆಯನ್ನು ಅನುಭವಿಸಬೇಕಾಗಿದೆ. ಅಲ್ಲದೆ ಅನೇಕ ಜೀವನಾವಶ್ಯಕ ವಸ್ತುಗಳ ಬೆಲೆ ಏರಿರುವುದರಿಂದ ಬಡ ಹಾಗೂ ಮಧ್ಯಮ ವರ್ಗದಿಂದ ಬಂದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಂದುವರೆಸುವುದು ದುಸ್ತರವಾಗಿದೆ. ಆದ್ದರಿಂದ ರಾಜ್ಯದ ಎಲ್ಲಾ ಎಸ್. ಎಫ್. ಐ. ಶಾಖೆಗಳು ಏಪ್ರಿಲ್ 1 ರಂದು ಕೇಂದ್ರ ಮತ್ತು ರಾಜ್ಯದ ಬಜೆಟ್‌ಗಳನ್ನು ವಿರೋಧಿಸಿ ಮೆರವಣಿಗೆ, ಸಭೆ ಹಾಗೂ ಬಸ್ ಪಿಕೆಟಿಂಗ್‌ಗಳ ಮೂಲಕ ರಾಜ್ಯಾದ್ಯಂತ ಪ್ರತಿಭಟಿಸಲು ಕರೆನೀಡಿದೆ.

ದಲಿತ ಮುಖಂಡರ ಮೇಲೆ ಹಲ್ಲೆ : ಖಂಡನೆ

ವಿರಾಜಪೇಟೆ ತಾಲ್ಲೂಕು ತಿತಿಮತಿಯಲ್ಲಿ ಅರಣ್ಯವಾಸಿ ರೈತರ ಹೋರಾಟಕ್ಕೆ ಬೆಂಬಲ ನೀಡಲು ಹೋಗಿದ್ದ ಖ್ಯಾತ ಬರಹಗಾರ ಶ್ರೀ ದೇವನೂರು ಮಹಾದೇವ ಹಾಗೂ "ಪಂಚಮ" ಪತ್ರಿಕೆಯ ವರದಿಗಾರ ಗೋವಿಂದಯ್ಯನವರ ಮೇಲೆ ಅರಣ್ಯಾಧಿಕಾರಿಗಳು ತಮ್ಮ ಸೇವಕರ ಮೂಲಕ ಹಲ್ಲೆ ನಡೆಸಿದ್ದಲ್ಲದೆ, ಕ್ಯಾಮರವನ್ನು ಪುಡಿ, ಪುಡಿ ಮಾಡಿ ಅವರ ಬಳಿ ಇದ್ದ ಕಾಗದ ಪತ್ರಗಳನ್ನು ಕಸಿದುಕೊಂಡಿದ್ದಾರೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವಿರಾಜಪೇಟೆ ಶಾಖೆಯು ಹಲ್ಲೆಯನ್ನು ತೀವ್ರ ಖಂಡಿಸಿದೆಯಲ್ಲದೆ ರೈತರ ನ್ಯಾಯಯುತವಾದ ಹೋರಾಟಕ್ಕೆ ಎಲ್ಲಾ ಜನತೆಯ ಬೆಂಬಲ ಕೋರಿದೆ.

ರಾಜ್ಯದಾದ್ಯಂತ ಏಪ್ರಿಲ್ 1 ರಂದು ಪಿಕೆಟಿಂಗ್

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು, ಸಂಸ್ಥೆಯಲ್ಲಿರುವ ಭ್ರಷ್ಟಾಚಾರವನ್ನು ತಡೆಗಟ್ಟುವ ಬದಲು ಒಂದೇ ಸಮನೆ ಪ್ರಯಾಣ ದರಗಳನ್ನು ಏರಿಸುತ್ತಿರುವುದನ್ನು ಪ್ರತಿಭಟಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯದಲ್ಲಿರುವ ಎಲ್ಲಾ ಘಟಕಗಳು ಹಾಗೂ ಸಾಮೂಹಿಕ ಸಂಘಟನೆಗಳು ಏಪ್ರಿಲ್ 1ರಂದು ರಸ್ತೆ ಸಾರಿಗೆ ಬಸ್ಸುಗಳನ್ನು ತಡೆದು ಪಿಕೆಟಿಂಗ್ ನಡೆಸಬೇಕೆಂದು ಪಕ್ಷದ ರಾಜ್ಯ ಸಮಿತಿ ತೀರ್ಮಾನಿಸಿದೆ. ಪಿಕೆಟಿಂಗ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಪಕ್ಷದ ಸದಸ್ಯರು, ಕಾರ್ಯಕರ್ತರು, ಸಾಮೂಹಿಕ ಸಂಘಟನೆಗಳ ಸದಸ್ಯರು, ಹಿತೈಷಿಗಳು ಹಾಗೂ ಸಾರ್ವಜನಿಕರಲ್ಲಿ ಪಕ್ಷದ ರಾಜ್ಯ ಸಮಿತಿ ವಿನಂತಿಸಿದೆ. ●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
... Bangalore-560 053 Phone : 24154